# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಶನಿವಾರ, ಮೇ 15, 2021

ಸಂಪುಟ : 48 ಸಂಚಿಕೆ : 01 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಜಿಲ್ಲಾಡಳಿತದಿಂದ ಬಸವ ಜಯಂತಿ ಆಚರಣೆ



ದಾವಣಗೆರೆ, ಮೇ 14 - ಜಿಲ್ಲಾಡಳಿತದ ವತಿಯಿಂದ ಜಿಲ್ಲಾಡಳಿತ ಭವನದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಶ್ರೀ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶುಕ್ರವಾರ ಸರಳವಾಗಿ ಆಚರಿಸಲಾಯಿತು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ್, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ನಿರ್ಮಿತಿ ಕೇಂದ್ರದ ರವಿ, ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಇದ್ದಾರೆ.

## ಮೇ 24ರ ನಂತರವೂ ಲಾಕ್‌ಡೌನ್ : ಸಚಿವರ ಇಂಗಿತ

ಬೆಂಗಳೂರು, ಮೇ 14 - ಮೇ 24 ರ ಬಳಿಕವೂ ಲಾಕ್‌ಡೌನ್ ಮುಂದುವರೆಸುವ ಇಂಗಿತವನ್ನು ಕಂದಾಯ ಸಚಿವ ಆರ್. ಅಶೋಕ್ ವ್ಯಕ್ತಪಡಿಸಿದ್ದಾರೆ.

ಲಾಕ್‌ಡೌನ್ ಮಾಡಿದ್ದರಿಂದ ಕೊರನಾ ಸೋಂಕು ಕಡಿಮೆಯಾಗಿದೆ. ಪೂರ್ಣವಾಗಿ ನಿಯಂತ್ರಣಕ್ಕೆ ತರಲು ವಿಸ್ತರಣೆ ಅಗತ್ಯವಿದೆ ಎಂದಿದ್ದಾರೆ.

ಕಾರ್ಯಕ್ರಮವೊಂದರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಮಾನ್ಯ ಪ್ರಜೆಯಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಹಾಲಿ ಲಾಕ್‌ಡೌನ್ ಪೂರ್ಣಗೊಳ್ಳುವ ಮುನ್ನ ಮುಖ್ಯಮಂತ್ರಿಯವರು ಕರೆಯುವ ಸಭೆಯಲ್ಲಿ ಲಾಕ್‌ಡೌನ್ ವಿಸ್ತರಣೆಗೆ ಒತಾಯಿಸುತ್ತೇನೆ ಎಂದು ಹೇಳಿದ್ದಾರೆ.

ಅಷ್ಟೇ ಅಲ್ಲ ಲಾಕ್‌ಡೌನ್‌ನಿಂದ ಆಗುವ ಪ್ರಯೋಜನ ಸಾರ್ವಜನಿಕರ ಹಿತದೃಷ್ಟಿಯಿಂದ ಲಾಕ್‌ಡೌನ್ ಮುಂದುವರೆಸುವುದು ಒಳಿತು ಎಂಬುದನ್ನು ಮನದಟ್ಟು ಮಾಡುತ್ತೇನೆ ಎಂದಿದ್ದಾರೆ.

ಮಕ್ಕಳಿಗಾಗಿ ಪ್ರಯಾಜ್ ಕೇಂದ್ರಗಳನ್ನು ವಿಶೇಷವಾಗಿ ಪ್ರಾರಂಭಿಸುತ್ತೇವೆ. ಇಲ್ಲಿ ದಾಖಲಾಗುವ ಪೋಷಕರಿಗೂ ಉಳಿದುಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗುವುದು. ಮುಂಬರುವ ದಿನಗಳಲ್ಲಿ ಕೋವಿಡ್‌ನ 3ನೇ ಅಲೆ ತಡೆಯಲು ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ ಎಂದರು.

ಸೋಂಕು ನಿವಾರಣೆಗಾಗಿ ಸರ್ಕಾರ ಮತ್ತು ನಾವು 24 ಗಂಟೆಯೂ ಕೆಲಸ ಮಾಡುತ್ತಿದ್ದೇವೆ. ಆದರೆ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ (2ನೇ ಪುಟಕ್ಕೆ)

# ಕೊರೊನಾಗೆ ಐವರ್ ಮೆಕ್ಟಿನ್ ಔಷಧ ಬೇಡ

## ಕರ್ನಾಟಕದಲ್ಲಿ ಬಳಕೆಗೆ ಪರಿಣಿತರ ಆಕ್ಷೇಪ

ನವದೆಹಲಿ, ಮೇ 14 – ಕೊರೊನಾ ರೋಗಿಗಳಿಗೆ ಐವರ್‌ಮೆಕ್ಟಿನ್ ಔಷಧ ಬಳಸಲು ಸಮರ್ಪಕ ಆಧಾರಗಳಿಲ್ಲ. ಮಧ್ಯಮ ತೀವ್ರತೆ ಇರುವ ಕೆಲವೇ ಪ್ರಕರಣಗಳಲ್ಲಿ ಇದನ್ನು ಬಳಸಬಹುದು ಎಂದು ಪರಿಣಿತರು ಹೇಳಿದ್ದಾರೆ.

ಈ ಔಷಧ ಬಳಸದಂತೆ ವಿಶ್ವ ಆರೋಗ್ಯ ಸಂಘಟನೆ ಎಚ್ಚರಿಕೆ ನೀಡಿದೆ. ಇಷ್ಟಾದರೂ ಮೂರು ರಾಜ್ಯಗಳು ಈ ಔಷಧ ವಿತರಣೆಗೆ ಯೋಜಿಸಿರುವ ಹಿನ್ನೆಲೆಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಬೇರೆ ಉತ್ತಮ ಆಯ್ಕೆಗಳಿರದ ಸಂದರ್ಭದಲ್ಲಿ ಮಾತ್ರ ಐವರ್‌ಮೆಕ್ಟಿನ್ ಉಪಯೋಗಿಸಬಹುದು ಎಂದು ಪರಿಣಿತರು ಹೇಳಿದ್ದಾರೆ. ಕರ್ನಾಟಕ, ಉತ್ತರಾಖಂಡ ಹಾಗೂ ಗೋವಾಗಳು ಈ ವಾರ ಕೊರೊನಾ ತಡೆ ಕ್ರಮವಾಗಿ ಈ ಔಷಧ ವಿತರಣೆಗೆ ಮುಂದಾಗಿವೆ. ಇಂತಹ ಕ್ರಮದ ಬಗ್ಗೆ ವಿಶ್ವ ಆರೋಗ್ಯ ಸಂಘಟನೆ ಹಾಗೂ ಇತರೆ ಸಂಸ್ಥೆಗಳು ಎಚ್ಚರಿಕೆ ನೀಡಿವೆ.

ಈ ಬಗ್ಗೆ ಟ್ವೀಟ್ ಮಾಡಿರುವ ವಿಶ್ವ ಆರೋಗ್ಯ ಸಂಘಟನೆಯ ಮುಖ್ಯ ವಿಜ್ಞಾನಿ ಸೌಮ್ಯ ಸ್ವಾಮಿನಾಥನ್, ಔಷಧೀಯ ಪ್ರಯೋಗದ ಹೊರತಾಗಿ ಬೇರೆಡೆ ಕೊರೊನಾ ವಿರುದ್ಧ ಐವರ್‌ಮೆಕ್ಟಿನ್ ಬಳಸಬಾರದು ಎಂದಿದ್ದಾರೆ.


ವಿಶ್ವದಾದ್ಯಂತ ಹಲವೆಡೆ ಔಷಧೀಯ ಪ್ರಯೋಗ ನಡೆಸಲಾಗುತ್ತಿದೆ. ಆದರೆ, ಇದುವರೆಗೂ ಈ ಔಷಧಿ ಕೊರೊನಾ ವಿರುದ್ಧ ಪರಿಣಾಮಕಾರಿ ಎಂಬುದಕ್ಕೆ ಸಾಕಷ್ಟು ಆಧಾರಗಳು ಲಭ್ಯವಾಗಿಲ್ಲ ಎಂದು ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯುನಿವರ್ಸಿಟಿಯ ಔಷಧೀಯ ವಿಜ್ಞಾನದ ಹಿರಿಯ ಡೀನ್ ಮೋನಿಕಾ ಗುಲಾಟಿ ಹೇಳಿದ್ದಾರೆ. (3ನೇ ಪುಟಕ್ಕೆ)

## ಸರಳ ಸಂಭ್ರಮದಿಂದ ರಂಜಾನ್ ಆಚರಣೆ

ದಾವಣಗೆರೆ, ಮೇ 14 - ಮೂವತ್ತು ದಿನಗಳು ಉಪವಾಸ (ರೋಜಾ) ಆಚರಿಸಿ, ಚಂದ್ರದರ್ಶನ ಮಾಡಿದ ನಗರಾದ್ಯಂತದ ಮುಸ್ಲಿಂ ಬಾಂಧವರು ಇಂದು ರಂಜಾನ್ ಹಬ್ಬವನ್ನು ಸರಳವಾಗಿ ಆಚರಿಸಿದರೂ ಸಹ ಮಕ್ಕಳಲ್ಲಿ ಸಂಭ್ರಮ ಕಂಡು ಬಂದಿತ್ತು.

ರಂಜಾನ್ ಹಬ್ಬದ ಈದ್-ಉಲ್-ಫಿತರ್ ಪ್ರಾರ್ಥನೆ (ನಮಾಜ್) ಆಯಾ ಪ್ರದೇಶದಲ್ಲಿನ ಮಸೀದಿಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಹಂತ - ಹಂತವಾಗಿ ಪ್ರಾರ್ಥನೆ ಸಲ್ಲಿಸಲಾಯಿತು. ಬಡವರಿಗೆ, ನಿರ್ಗತಿಕರಿಗೆ, ಆರ್ಥಿಕ ಸಹಾಯ ಫಿತ್ರಾ, ಜಕಾತ್ ನೀಡುವ ಮೂಲಕ ಹಬ್ಬದ ಸಂತೋಷವನ್ನು ವಿನಿಮಯ ಮಾಡಿಕೊಂಡರು.

ದೇಶಾದ್ಯಂತ ಆವರಿಸಿರುವ ಕೊರೊನಾ ಮಹಾಮಾರಿ ಆರ್ಭಟಕ್ಕೆ ನಲುಗಿದ ನಗರದ ಮುಸ್ಲಿಂ ಬಾಂಧವರು ಸ್ವಯಂ ಪ್ರೇರಿತವಾಗಿ



ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ ರದ್ದುಗೊಳಿಸಿ, ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಮಸೀದಿಗಳ ಮುತುವಲ್ಲಿ ಉಲೇಮಾಗಳ ಸಭೆಯಲ್ಲಿ ಈ ಹಿಂದೆ ತೆಗೆದುಕೊಂಡಿದ್ದ ನಿರ್ಣಯಕ್ಕೆ ಬದ್ಧರಾಗಿ ಈ ವರ್ಷವೂ ಸಹ ಈದ್ಗಾಗಳಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿಲ್ಲ.

**ಮನೆಯಲ್ಲಿಯೇ ಇಫ್ತಾರ್-ನಮಾಜ್ :** ಒಂದು ತಿಂಗಳಿನಿಂದಲೂ ಉಪವಾಸ ಆಚರಿಸಿದ ಮುಸ್ಲಿಂ ಬಾಂಧವರು ವಕ್ಫ್ ಬೋರ್ಡ್ ಆದೇಶದಂತೆ ದಿನದ 5 ಬಾರಿಯ ಪ್ರಾರ್ಥನೆಯನ್ನು ಮನೆಯಲ್ಲಿಯೇ ಸಲ್ಲಿಸಿದರು. ಜೊತೆಗೆ ರೋಜಾ ಬಿಡುವ ಇಫ್ತಾರ್ ಕೂಟವನ್ನು ಅವರವರ ಮನೆಯಲ್ಲಿಯೇ ಕುಟುಂಬ ಸದಸ್ಯರೊಂದಿಗೆ ಸೇರಿಕೊಂಡು ಆಹಾರ - ಹಣ್ಣು ಸೇವಿಸುವುದರ ಮೂಲಕ ರೋಜಾವನ್ನು ಇಫ್ತೇಯಾರಿ ಮಾಡಿದರು.

ಬಹುತೇಕರು ಮನೆಗಳಲ್ಲಿ ಆಹಾರದ ಪೊಟ್ಟಣಗಳನ್ನು ತಯಾರಿಸಿ, ಮನೆ ಮನೆಗೆ ವಿತರಿಸುವ ಮೂಲಕ ರಂಜಾನ್ ತಿಂಗಳ ಮಹತ್ವವನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಹೀಗಾಗಿ ಈ ವರ್ಷವೂ ಸಹ ನಗರದ ಅನೇಕ ಮಸೀದಿಗಳಲ್ಲಿ ಐದು ಜನರ ಹೊರತು, ಹೆಚ್ಚಿನ ಜನರಿಗೆ ನಮಾಜ್‌ಗೆ ಅವಕಾಶವಿರಲಿಲ್ಲ.

**ಲಾಕ್‌ಡೌನ್ - ಬಟ್ಟೆ** (3ನೇ ಪುಟಕ್ಕೆ)

## ರಾಜ್ಯದಲ್ಲಿ 41,779 ಕೊರೊನಾ ಸೋಂಕಿತರು ಪತ್ತೆ

ಬೆಂಗಳೂರು, ಮೇ 14 – ರಾಜ್ಯದಲ್ಲಿ ಶುಕ್ರವಾರ 41,779 ಕೊರೊನಾ ಸೋಂಕಿತರು ಕಂಡುಬಂದಿದ್ದು, 373 ಜನ ಸಾವನ್ನಪ್ಪಿದ್ದಾರೆ.

ಇದೇ ದಿನ 35,879 ಜನ ಕೊರೊನಾದಿಂದ ಗುಣಮುಖರಾಗಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಬೆಂಗಳೂರು ನಗರ ಒಂದರಲ್ಲೇ 14,316 ಸೋಂಕಿತರು ಕಂಡು ಬಂದಿದ್ದಾರೆ. ರಾಜ್ಯದಲ್ಲೀಗ ಸಕ್ರಿಯ ಸೋಂಕಿತರ ಸಂಖ್ಯೆ 5.98 ಲಕ್ಷವಾಗಿದೆ.

## ರಾಜ್ಯಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂನಲ್ಲಿ ಕೇಂದ್ರದ ಅರ್ಜಿ


**ಹಿಂದುಳಿದ ವರ್ಗಗಳ ಘೋಷಣೆ**

ನವದೆಹಲಿ, ಮೇ 14 – ಸಂವಿಧಾನದ 102ನೇ ತಿದ್ದುಪಡಿಯಿಂದಾಗಿ ರಾಜ್ಯಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸಲು ಇರುವ ಅಧಿಕಾರ ಕಳೆದುಕೊಂಡಿವೆ ಎಂದು ಸುಪ್ರೀಂ ಕೋರ್ಟ್ ನೀಡಿದ ಬಹುಮತದ ತೀರ್ಪಿನ ಮರು ಪರಿಶೀಲನೆಗಾಗಿ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿದೆ.

ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಪೀಠ ಮಹಾರಾಷ್ಟ್ರದಲ್ಲಿ ಮರಾಠ ಮೀಸಲಾತಿ ಕುರಿತು ತೀರ್ಪು ನೀಡುವಾಗ, 102ನೇ ತಿದ್ದುಪಡಿ ನಂತರ ಕೇಂದ್ರ ಸರ್ಕಾರವಷ್ಟೇ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಘೋಷಿಸಬೇಕು ಎಂದು 3-2ರ ಬಹುಮತದ ತೀರ್ಪು ನೀಡಿತ್ತು.

208ರಲ್ಲಿ ಕೇಂದ್ರ ಸರ್ಕಾರ ಸಂವಿಧಾನಕ್ಕೆ 102ನೇ ತಿದ್ದುಪಡಿ ತರುವ ಮೂಲಕ (3ನೇ ಪುಟಕ್ಕೆ)

## ಕೋವಿಡ್ ತಡೆಗಟ್ಟಲು ಎಲ್ಲರೂ ಶಕ್ತಿ ಮೀರಿ ಕಾರ್ಯನಿರ್ವಹಿಸಿ



**ಜಗಳೂರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಕರೆ**

ಜಗಳೂರು, ಮೇ 14 - ಕೋವಿಡ್-19 ಹೆಚ್ಚಳವಾಗುತ್ತಿದ್ದು, ತಡೆಗಟ್ಟಲು ಎಲ್ಲರೂ ಶಕ್ತಿ ಮೀರಿ ಕಾರ್ಯ ನಿರ್ವಹಿಸಬೇಕು. ಬೆಡ್, ಆಕ್ಸಿಜನ್ ಸೇರಿದಂತೆ ಏನೇ ಸಮಸ್ಯೆಗಳು ಇದ್ದರೂ ನನಗೆ ಇಲ್ಲವೇ ಜಿಲ್ಲಾಧಿಕಾರಿಗಳಿಗೆ ತಿಳಿಸುವಂತೆ ಅಧಿಕಾರಿಗಳಿಗೆ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಸಭಾಂಗಣದಲ್ಲಿ ಇಂದು ತಾಲ್ಲೂಕು ಮಟ್ಟದ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಮಾತನಾಡಿದರು.

ಜಗಳೂರು ಸಾರ್ವಜನಿಕ ಆಸ್ಪತ್ರೆಗೆ ನುರಿತ ಟೆಕ್ನೀಷಿಯನ್ ಸೇರಿದಂತೆ ವೆಂಟಿಲೇಟರ್‌ಗಳ ಎಲ್ಲಾ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮಾಡಲಾಗುವುದು. ತಾಲ್ಲೂಕಿನ ಬಗ್ಗೆ ಜಿಲ್ಲಾಧಿಕಾರಿಗಳು, ನಾವು ಹೆಚ್ಚಿನ ಶ್ರಮವಹಿಸಿ ಅಗತ್ಯ ಕ್ರಮ ಕೈಗೊಂಡಿದ್ದೇವೆ ಎಂದರು.

ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ಕೋವಿಡ್‌ನಿಂದ ಚಿಕಿತ್ಸೆ ಪಡೆದು (3ನೇ ಪುಟಕ್ಕೆ)

## ಎಚ್ಚೆತ್ತುಕೊಳ್ಳದ ಜನ: ಅವಕಾಶದ ವೇಳೆ ಕಾಣದ ನಿಯಮ

ದಾವಣಗೆರೆ, ಮೇ 14 - ದೇಶ ಹಾಗೂ ರಾಜ್ಯದಲ್ಲಿ ಕೊರೊನಾಗೆ ಲೆಕ್ಕವಿಲ್ಲದಷ್ಟು ಮಂದಿ ಬಲಿಯಾಗ್ತಿದ್ದಾರೆ. ಅದೆಷ್ಟೋ ಜನರು ತಮ್ಮವರನ್ನು ಕಳೆದುಕೊಂಡು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಸೋಂಕಿತರು ಬೆಡ್ ಸಿಗದೇ ಆಕ್ಸಿಜನ್ ಕೊರತೆಯಿಂದ ನರಳಿ, ನರಳಿ ಪ್ರಾಣ ಬಿಡುತ್ತಿದ್ದಾರೆ. ಈ ನಡುವೆ ಪರಿಸ್ಥಿತಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಸಂಪೂರ್ಣ ಲಾಕ್‌ಡೌನ್ ಜಾರಿಗೊಳಿಸಿ ಕಠಿಣ ನಿಯಮಗಳನ್ನು ತಂದಿದೆ. ಆದರೆ ಜನ ಮಾತ್ರ ಎಚ್ಚೆತ್ತಿಲ್ಲ. ಅಗತ್ಯ ವಸ್ತುಗಳ ಖರೀದಿಗೆ ನೀಡಿರುವ ಅವಕಾಶದ ಸಮಯದಲ್ಲಿ ಮೈಮರೆತು ಸುಖಾಸುಮ್ಮನೆ ರಸ್ತೆಯಲ್ಲಿ ಗುಂಪು ಗುಂಪಾಗಿ ಓಡಾಡುವುದು ಅಲ್ಲದೇ, ಮಾಸ್ಕ್‌ಗಳ ವಿಷಯದಲ್ಲಿ ಬೇಜವಾಬ್ದಾರಿ ತೋರಿಸುತ್ತಾ ತಮ್ಮ ಜೀವಕ್ಕೂ ಆಪತ್ತು ತಂದುಕೊಳ್ಳುವ ಜೊತೆಗೆ ಇತರರ ಆರೋಗ್ಯಕ್ಕೂ ತೊಂದರೆ ಉಂಟು ಮಾಡುವುದು ನಗರದ ಅಲ್ಲಲ್ಲಿ ಇಂದು ಕಂಡು ಬಂತು.

ನಗರದ ವಿವಿಧ ವೃತ್ತಗಳಲ್ಲಿ ಇಂತಹದ್ದೇ ದೃಶ್ಯಗಳು ಕಂಡು ಬಂದಿವೆ. ಬೆಳಿಗ್ಗೆ 6 ರಿಂದ 10 ಗಂಟೆಯವರೆಗೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿದೆ. ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳುವ ಜನರು ಮಾಸ್ಕ್‌ಗಳನ್ನು ಧರಿಸದೇ, ಸಾಮಾಜಿಕ ಅಂತರ (2ನೇ ಪುಟಕ್ಕೆ)

## ರಾಜಕೀಯ ಕಿತ್ತಾಟದಿಂದ ಹರಿದು ಹಂಚಿ ಹೋಗುತ್ತಿರುವ ವೀರಶೈವರು



**ಶ್ರೀ ವೀರಭದ್ರೇಶ್ವರ ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ರಂಭಾಪುರಿ ಜಗದ್ಗುರುಗಳ ಕಳವಳ**

ಮಲೇಬೆನ್ನೂರು, 14- ಮೀಸಲಾತಿ ಮತ್ತು ರಾಜಕೀಯ ಕಿತ್ತಾಟದಿಂದಾಗಿ ಪ್ರಸ್ತುತ ದಿನಮಾನದಲ್ಲಿ ವೀರಶೈವ ಸಮಾಜ ಹರಿದು ಹಂಚಿ ಹೋಗುತ್ತಿದೆ ಎಂದು ರಂಭಾಪುರಿ ಪೀಠದ ಜಗದ್ಗುರು ಡಾ. ಶ್ರೀ ವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಹೊರವಲಯದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ವೀರಭದ್ರೇಶ್ವರ, ಶ್ರೀ ಮಹಾಗಣಪತಿ, ಶ್ರೀ ಕಾಲಭೈರವೇಶ್ವರ, ಶ್ರೀ ನಾಗದೇವತಾ ಪರಿವಾರ ದೇವಾಲಯವನ್ನು ಬ್ರಾಹ್ಮೀ ಮುಹೂರ್ತದಲ್ಲಿ ಲೋಕಾರ್ಪಣೆಗೊಳಿಸಿ, ನೂತನ ಶಿಲಾಮೂರ್ತಿಗಳಿಗೆ ಪ್ರಾಣ ಪ್ರತಿಷ್ಠಾಪನೆ ಹಾಗೂ ಗೋಪುರಗಳಿಗೆ ಕಳಸಾರೋಹಣ ನೆರವೇರಿಸಿದ ನಂತರ ಆಶೀರ್ವಚನ ನೀಡಿದರು.

ವೀರಶೈವ ಧರ್ಮವನ್ನು ಉಳಿಸುವುದಕ್ಕಾಗಿ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಆದರೆ ಫಲ ಸಿಕ್ಕಿಲ್ಲ. ನಿರಾಸೆಯಾಗಿ ತಟಸ್ಥರಾಗಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದ ಶ್ರೀಗಳು, ವೀರಶೈವ ಧರ್ಮದ ಒಳಪಂಗಡಗಳು ಒಂದಾಗಿದ್ದರೆ ಮಾತ್ರ ಧರ್ಮ, (3ನೇ ಪುಟಕ್ಕೆ)

## ಜಿಲ್ಲೆಯಲ್ಲಿ 581 ಸೋಂಕಿತರು ಪತ್ತೆ

ದಾವಣಗೆರೆ, ಮೇ 14 – ಜಿಲ್ಲೆಯಲ್ಲಿ ಶುಕ್ರವಾರ 581 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 451 ಸೋಂಕಿತರು ಗುಣಮುಖರಾಗಿದ್ದಾರೆ. ಕೊರೊನಾದಿಂದ ನಗರದ 53 ವರ್ಷದ (3ನೇ ಪುಟಕ್ಕೆ)

## ನೇಪಾಳದ ಚಿತಾಗಾರಗಳಲ್ಲಿ ಹೆಚ್ಚಿದ ಶವಗಳು

**ಕೊರೊನಾದ ಕರಾಳತೆ ಉಲ್ಬಣ**

ಕಠ್ಮಂಡು, ಮೇ 14 – ನೇಪಾಳದಲ್ಲಿ ಕೊರೊನಾ ಪರಿಸ್ಥಿತಿ ಉಲ್ಬಣಿಸಿದ್ದು, ಅಲ್ಲಿನ ಚಿತಾಗಾರಗಳು ಶವಗಳಿಂದ ತುಂಬಿಕೊಂಡಿವೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ.

ಕೊರೊನಾದಿಂದ 214 ಸಾವುಗಳು ಸಂಭವಿಸಿವೆ ಎಂದು ಅಲ್ಲಿನ ಆರೋಗ್ಯ ಇಲಾಖೆ ತಿಳಿಸಿದೆ. ಕಠ್ಮಂಡು ಕಣಿವೆ ಒಂದರಲ್ಲೇ ಕಳೆದ ಹಲವಾರು ದಿನಗಳಿಂದ 100ಕ್ಕೂ ಹೆಚ್ಚು ಮೃತದೇಹಗಳು ಚಿತಾಗಾರಕ್ಕೆ ಬರುತ್ತಿವೆ ಎಂದು ನೇಪಾಳದ ಸೈನ್ಯದ ಮೂಲಗಳು ಹೇಳಿವೆ. ಇತ್ತೀಚಿನ ದಿನಗಳಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗದೇ ಇದ್ದರೂ, ಮೃತದೇಹಗಳು ಬರುವ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಕಠ್ಮಂಡು ಪೋಸ್ಟ್ ಪತ್ರಿಕೆ ವರದಿ ಮಾಡಿದೆ.

ಪ್ರಸಿದ್ಧ ಪಶುಪತಿನಾಥ ದೇವಾಲಯದ ಬಳಿ ಇರುವ ಪಶುಪತಿ ಚಿತಾಗಾರದಲ್ಲಿ (3ನೇ ಪುಟಕ್ಕೆ)

## ಅಕ್ಷಯ ತೃತೀಯ ಸಂಭ್ರಮಕ್ಕೆ ಕೊರೊನಾ ಕರಿನೆರಳು

ದಾವಣಗೆರೆ, ಮೇ 14 - ಇಡೀ ವಿಶ್ವಕ್ಕೇ ಸಮಾನತೆ ಸಾರಿದ ವಿಶ್ವಗುರು ಬಸವಣ್ಣರ ಜಯಂತಿ ಇಂದು. ಅಕ್ಷಯ ತೃತೀಯ ಶುಭ ಸಮಾರಂಭಗಳಿಗೆ ಸುದಿನ. ಆದರೆ, ಕೊರೊನಾ ಮಹಾಮಾರಿ ಈ ಎಲ್ಲದರ ಮೇಲೂ ಕರಿನೆರಳು ಬೀರಿದೆ. ಮಾರುಕಟ್ಟೆಯಲ್ಲಿ ಹೂ-



ಹಣ್ಣು ಖರೀದಿ ಮಾಡುವವರು ವಿರಳವಾಗಿ ವ್ಯಾಪಾರಸ್ಥರಿಗೆ ನಷ್ಟದ ಬರೆ ಎಳೆದಂತಾಯಿತು.

**ಲಾಕ್‌ಡೌನ್ ಎಫೆಕ್ಟ್: ಬಾಡಿದ ಹೂ, ಹಣ್ಣು**

ಗೃಹ ಪ್ರವೇಶ, ಮದುವೆ ಸೇರಿದಂತೆ ಹಲವು ಶುಭ ಕಾರ್ಯಗಳಿಗೆ ಬಸವ ಜಯಂತಿ ತುಂಬಾ ಪ್ರಾಶಸ್ತ್ಯ ದಿನ. ಎಲ್ಲವೂ ಚೆನ್ನಾಗಿದ್ದರೆ ಮದುವೆ ಮನೆ, ಕಲ್ಯಾಣ ಮಂಟಪ, ನೂತನ ಮನೆಗಳು ಬಗೆಬಗೆಯ ಹೂಗಳಿಂದ ಅಲಂಕೃತಗೊಳ್ಳಬೇಕಾಗಿತ್ತು. ಅಂತೆಯೇ ಹಣ್ಣುಗಳ ಖರೀದಿಯ ಭರಾಟೆಯೂ ಜೋರಾಗಿಯೇ ಇರುತ್ತಿತ್ತು. ಆದರೆ ಕೊರೊನಾದ (2ನೇ ಪುಟಕ್ಕೆ)

## ಸ್ಪುಟ್ನಿಕ್ ಲಸಿಕೆಗೆ ಚಾಲನೆ ಪ್ರತಿ ಡೋಸ್ ಲಸಿಕೆ ಬೆಲೆ 995 ರೂ.



ನವದೆಹಲಿ, ಮೇ 14 - ಸ್ಪುಟ್ನಿಕ್ ವಿ ಲಸಿಕೆ ನೀಡುವುದಕ್ಕೆ ದೇಶದಲ್ಲಿ ಚಾಲನೆ ನೀಡಲಾಗಿದೆ ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಹೈದರಾಬಾದ್‌ನಲ್ಲಿ ಮೊದಲ ಡೋಸ್ ನೀಡಿದೆ.

ಸೀಮಿತವಾಗಿ, ಪ್ರಾಯೋಗಿಕವಾಗಿ ಲಸಿಕೆಗೆ ಚಾಲನೆ ನೀಡಲಾಗಿದೆ. ಪ್ರಸಕ್ತ ದೇಶದಲ್ಲಿ ಲಸಿಕೆ ಬೆಲೆ ಪ್ರತಿ ಡೋಸ್‌ಗೆ 995.40 ರೂ. ಆಗಿದೆ.

ಸ್ಥಳೀಯವಾಗಿ ಲಸಿಕೆ ಪೂರೈಕೆ ಆರಂಭವಾದ ನಂತರ ಬೆಲೆ ಇಳಿಯಬಹುದು ಎಂದು ಡಾ. ರೆಡ್ಡೀಸ್ ಲ್ಯಾಬೊರೇಟರೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸ್ಪುಟ್ನಿಕ್ ವಿ ಲಸಿಕೆಯ ಡೋಸ್‌ಗಳನ್ನು ಆಮದು ಮಾಡಿಕೊಳ್ಳಲಾಗಿದ್ದು, ಮೇ 1ರಂದು ಲಸಿಕೆ ಬಂದಿದ್ದವು. ಮೇ 13, 2021ರಂದು ಲಸಿಕೆಗೆ ಕಸೌಲಿಯಲ್ಲಿರುವ ಸೆಂಟ್ರಲ್ ಡ್ರಗ್ಸ್ ಲ್ಯಾಬೊರೇಟರಿ ಅನುಮತಿ ನೀಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂದಿನ ತಿಂಗಳಲ್ಲಿ ಲಸಿಕೆಗಳು ಬರಲಿವೆ. ನಂತರದಲ್ಲಿ ಸ್ಪುಟ್ನಿಕ್ ವಿ ಲಸಿಕೆಯನ್ನು ಭಾರತೀಯ ಸಹಯೋಗಿಗಳ ಮೂಲಕ ಉತ್ಪಾದಿಸಲಾಗುವುದು ಎಂದೂ ಡಾ. ರೆಡ್ಡೀಸ್ ಲ್ಯಾಬೊರೇಟರಿ ಹೇಳಿದೆ.

ಸಮಯಕ್ಕೆ ಸರಿಯಾಗಿ ಲಸಿಕೆ ಪೂರೈಕೆ ಮಾಡಲು (3ನೇ ಪುಟಕ್ಕೆ)

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13-05-2021ರಂದು ನಿಧನರಾದ
ನ್ಯೂ ಎಂ.ಜಿ.ಎಸ್. ಜ್ಯೂಯಲರ್ಸ್‌ಮಾಲೀಕರು, ನಮ್ಮೆಲ್ಲರ ಆತ್ಮೀಯರಾಗಿದ್ದ
**ಶ್ರೀ ದತ್ತಾತ್ರೇಯ ಆರ್. ರೇವಣಕರ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಗಳು. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ನಲ್ಲೂರು ಅರುಣಾಚಲ ರೇವಣಕರ್ ಮತ್ತು ಕುಟುಂಬ ವರ್ಗ**
**ದೈವಜ್ಞ ಬ್ರಾಹ್ಮಣ ರೇವಣಕರ್ ಪರಿವಾರ, ದಾವಣಗೆರೆ.**

## ಹಳೇಬಾತಿ ರೇವಣಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ, ದಲ್ಲಾಲಿ ಮಂಡಿ ವರ್ತಕರಾದ **ಶ್ರೀ ಅಗಸನಕಟ್ಟೆ ರೇವಣಸಿದ್ದಪ್ಪ** ಅವರು ದಿನಾಂಕ 14.05.2021ರ ಶುಕ್ರವಾರ ಸಂಜೆ 6.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಸಹೋದರರು, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.05.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ
ಮೊ. : 94487 05467, 90080 67767

# ವಚನಗಳ ಮೂಲಕ ಸಮಾಜವನ್ನು ಸುಧಾರಿಸಿದ ಬಸವಣ್ಣ

## ಹರಿಹರ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ



ಹರಿಹರ, ಮೇ 14- ಜಗಜ್ಯೋತಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಸಮಾಜ ಸುಧಾರಣೆಯ ಒಳಿತಿಗಾಗಿ ಮಾಡಿದ ಸಾಧನೆ ಅಪ್ರತಿಮವಾಗಿದೆ ಎಂದು ತಹಶೀಲ್ದಾರ ಕೆ.ಬಿ. ರಾಮಚಂದ್ರಪ್ಪ ಹೇಳಿದರು.

ನಗರದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆದ ಜಗಜ್ಯೋತಿ ಶ್ರೀ ಬಸವೇಶ್ವರರ ಜಯಂತಿ ಆಚರಣೆ ಸಮಾರಂಭದಲ್ಲಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಸಮಾಜದಲ್ಲಿನ ಅಂಕು - ಡೊಂಕುಗಳನ್ನು ಹಾಗೂ ಮೌಢ್ಯತೆಗಳನ್ನು ಹೋಗಲಾಡಿಸಲು ತಮ್ಮ ವಚನಗಳ ಮೂಲಕ 12ನೇ ಶತಮಾನದಲ್ಲಿ ಸಮಾಜದ ಒಳಿತಿಗಾಗಿ ಬಸವೇಶ್ವರರು ಶ್ರಮಿಸಿದರು ಎಂದರು.

ಬಸವಣ್ಣನವರ ಕಾಲದಲ್ಲಿ ಬಹಳ ಜನರಿಗೆ ವಿದ್ಯೆಯ ಕೊರತೆ ಇತ್ತು. ಆದರೆ ಅವರು ಸರಳ ಸಾಹಿತ್ಯದ ಮೂಲಕ ವಚನಗಳನ್ನು ರಚಿಸಿ ಅದರ ಮೂಲಕ ಸದೃಢ ಸಮಾಜದ ನಿರ್ಮಾಣದ ಕಾರ್ಯ ಮಾಡಿದರು. ಅಧ್ಯಾತ್ಮದಲ್ಲಿ ತಮ್ಮನ್ನು ತಾವು ಹೆಚ್ಚಾಗಿ ತೊಡಗಿಸಿಕೊಂಡು ಲಿಂಗಪೂಜೆ, ಶಿವಧ್ಯಾನವನ್ನು ಹೆಚ್ಚು ಮಾಡಿದರು. ಬಸವಣ್ಣನವರ ತತ್ವ, ಆದರ್ಶಗಳು ಇನ್ನೂ ಜೀವಂತವಾಗಿ ಇರಲು ಅವರಲ್ಲಿದ್ದ ಸಾಮಾಜಿಕ ಕಳಕಳಿಯೇ ಕಾರಣ. ಯುವಪೀಳಿಗೆ ಅವರ ತತ್ವಾದರ್ಶಗಳನ್ನು ತಮ್ಮ ನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಅವರಂತೆ ಸಾಧಕರಾಗಿ ಬಾಳುವುದಕ್ಕೆ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಹುಜನ ಸಮಾಜ ಪಾರ್ಟಿ ಅಧ್ಯಕ್ಷ ಡಿ. ಹನುಮಂತಪ್ಪ, ಕಂದಾಯ ಇಲಾಖೆ ಸಿಬ್ಬಂದಿಗಳಾದ ಸಂಗೀತ ಜೋಷಿ, ಸಂತೋಷ್, ಹೇಮಂತ್, ಇನ್ನಿತರರು ಹಾಜರಿದ್ದರು.

# ಮನೆಗಳಲ್ಲಿಯೇ ರಂಜಾನ್ ಪ್ರಾರ್ಥನೆ



**ಹರಿಹರ**

ಹರಿಹರ, ಮೇ 14- ಕಳೆದ ವರ್ಷದಂತೆ ಈ ಬಾರಿಯೂ ರಂಜಾನ್ ಹಬ್ಬದ ಸಂದರ್ಭದಲ್ಲಿ ಕೊರೊನಾ ಲಾಕ್‌ಡೌನ್ ಎದುರಾಗಿರುವುದರಿಂದ ಈದ್ಗಾ ಮೈದಾನದ ಬದಲಿಗೆ ಮನೆಗಳಲ್ಲೇ ನಮಾಜ್ ಸಲ್ಲಿಸಲಾಯಿತು.

ಸೀಮಿತ ಸಂಖ್ಯೆಯಲ್ಲಿ ಮಸೀದಿಗಳಲ್ಲೂ ಸಾಂಕೇತಿಕವಾಗಿ ನಮಾಜ್ ಸಲ್ಲಿಸಲಾಯಿತು. ತಾಲ್ಲೂಕಿನ ಮಲೇಬೆನ್ನೂರು, ಭಾನುವಳ್ಳಿ, ಬೆಳ್ಳೂಡಿ, ಕರಲಹಳ್ಳಿ, ರಾಜನಹಳ್ಳಿ, ಹೊಳೆಸಿರಿಗೆರೆ, ಅಮರಾವತಿ ಸೇರಿದಂತೆ, ಹಲವು ಗ್ರಾಮಗಳಲ್ಲಿ ಮನೆಗಳಲ್ಲಿಯೇ ಪ್ರಾರ್ಥನೆ ಸಲ್ಲಿಸಲಾಯಿತು.

ಬೆಳಗಿನ ಜಾವ ಸೂರ್ಯೋದಯಕ್ಕೆ ಮುನ್ನ ಸಹೇರಿ (ಆಹಾರ ಸೇವನೆ) ಮಾಡಿ ಆರಂಭಿಸುವ ಉಪವಾಸ ಸೂರ್ಯಾಸ್ತವಾಗುವವರೆಗೆ ನಡೆಯುತ್ತದೆ. ಇಂತಹ 30 ಕಠಿಣ ಉಪವಾಸಗಳ ನಂತರ ರಂಜಾನ್ ಆಚರಿಸಲಾಗುತ್ತದೆ.

ಹಬ್ಬದ ನಿಮಿತ್ತ ಶ್ಯಾವಿಗೆ ಸಿಹಿ ತಿಂಡಿ, ತಿನಿಸುಗಳನ್ನು ಸೇವಿಸಿದರು. ನೆರೆಹೊರೆ, ಬಂಧು, ಬಾಂಧವರನ್ನು ಆಲಂ ಗಿಸಿ, ಕೈಕುಲುಕುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯಿಸಿಕೊಳ್ಳುವ ಬದಲು ಕೇವಲ ಮಾತಿನ ಮೂಲಕ ಶುಭಾಶಯ ಕೋರಿದ್ದು ಕೊರೊನಾ ಪರಿಣಾಮವಾಗಿತ್ತು.

ಹೊಂದಿರುವ ಸಂಪತ್ತು ಹಾಗೂ ಮನೆಯ ಸದಸ್ಯರನ್ನು ಆಧರಿಸಿ ಜಕಾತ್, ಫಿತ್ರ ಮೂಲಕ ಬಡವರಿಗೆ ದಾನ, ಧರ್ಮ ಮಾಡಲಾಯಿತು.

ಲಾಕ್‌ಡೌನ್ ನಿಮಿತ್ತ ಬಸ್, ವಾಹನ ವ್ಯವಸ್ಥೆ ಇಲ್ಲದ್ದರಿಂದ ಬಹುತೇಕರು ತಮ್ಮ ಬಡ ಬಂಧು, ಬಾಂಧವರಿಗೆ ಫೋನ್‌ಪೇ, ಗೂಗಲ್‌ಪೇ, ಆನ್‌ಲೈನ್ ಮೂಲಕವೂ ಹಾಗು ನಗದು ಮೂಲಕ ದಾನವನ್ನು ತಲುಪಿಸಿದರು.

# ಅಕ್ಷಯ : ಕೊರೊನಾ ಕರಿನೆರಳು

(1ನೇ ಪುಟದಿಂದ) ಅಡ್ಡಿಯಿಂದಾಗಿ ಸರಳ ಆಚರಣೆಯಿಂದ ಮಾರುಕಟ್ಟೆಗಳಲ್ಲಿ ಹೂ, ಹಣ್ಣು ಕೇಳೋರೇ ಇಲ್ಲದಂತಾ ಗಿತ್ತು. ಹಲವರು ಶುಭ ಸಮಾರಂಭ ಗಳನ್ನು ಮುಂದೂಡಿದ್ದರೆ ಇನ್ನೂ ಕೆಲವರು ನಿಗದಿಯಾದ ಕಾರ್ಯ ಕ್ರಮಗಳನ್ನು ಸರಳವಾಗಿ ಆಚರಿಸುತ್ತಿದ್ದು, ಹೂವಿನ ಕಂಪು, ಹಣ್ಣಿನ ಘಮಲೂ ಬೀರದಂತಾಯಿತು.

ಹೂ, ಹಣ್ಣು ಖರೀದಿ ಮಾಡುವವರು ಇಲ್ಲದೇ ಮಾರುಕಟ್ಟೆಯಲ್ಲೇ ಕೊಳೆಯುವಂತಾಗಿತ್ತು. ಬೆಳಿಗ್ಗೆ ಹೆಚ್ಚಿನ ದರಕ್ಕೆ ಮಾರಾಟ ಮಾಡಿದ ಮಾರಾ ಟಗಾರರು ಮಧ್ಯಾಹ್ನ ಸಂಜೆಯಾಗುತ್ತಿದ್ದಂತೆ ಕಡಿಮೆ ದರಕ್ಕೆ ಮಾರಾಟ ಮಾಡಿ ಹೂ, ಹಣ್ಣು ಖಾಲಿಯಾದರೆ ಸಾಕು ಎನ್ನುವ ಹಂತಕ್ಕೆ ತಲುಪಿದ್ದರು.

ಪ್ರತಿ ವರ್ಷ ಸಾಮಾನ್ಯವಾಗಿ ಅಕ್ಷಯ ತೃತೀಯಗೆ ಹೂವಿನ ದರ ಹೆಚ್ಚಾಗಿಯೇ ಇರುತ್ತಿತ್ತು. ಆದರೆ ಈ ಬಾರಿ ಕೊರೊನಾದಿಂದ ಹೂ ಮತ್ತು ಹಣ್ಣು ಕೊಳೋರೆ ಇಲ್ಲ. ಬಿಸಿಲ ಜಳಕ್ಕೆ ಹೂವುಗಳು ಬಾಡಿ ಹಾಳಾಗಿ ಹೋಗುವಾಗ ನೊಂದುಕೊಳ್ಳುತ್ತಾ ಲಾಭಕ್ಕಲ್ಲ ತಂದ ಅಸಲಿಗೆ ಕೊಟ್ಟು ಖಾಲಿ ಮಾಡಿ ಮನೆ ಸೇರಿದರೆ ಸಾಕು ಎನ್ನುತ್ತಿದ್ದರು ವ್ಯಾಪಾರಸ್ಥರು.

**ಕಸಿದ ಬಂಗಾರದ ದಿನ:** ಅಕ್ಷಯ ತೃತೀಯ ಶುಭ ದಿನದಂದು ಬೆಳ್ಳಿ, ಬಂಗಾರ, ಆಸ್ತಿ ಮತ್ತು ವಾಹನ ಖರೀದಿಸಲು, ಯಾವುದಾದರು ಹೊಸ ವ್ಯವಹಾರಕ್ಕೆ ಕೈ ಹಾಕಲು, ರೈತರು ಹೊಲದಲ್ಲಿ ಹೊಸ ಬೆಳೆಗೆ ಕೆಲಸ ಪ್ರಾರಂಭಿಸಲು ತುಂಬಾ ಶುಭವೆಂದು ಈ ದಿನವನ್ನು ಪರಿಗಣಿಸಲಾಗಿದೆ. ಬೆಳ್ಳಿ, ಬಂಗಾರ ಖರೀದಿಸಿದರೆ ಬಾಳು ಬಂಗಾರವಾಗಲಿದೆ ಎಂಬ ನಂಬಿಕೆಯೂ ಇದೆ. ಹಾಗಾಗಿ ಪ್ರತಿ ಅಕ್ಷಯ ತೃತೀಯ ದಿನದಂದು ಬೆಳ್ಳಿ, ಬಂಗಾರ ಖರೀದಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಣಲಾಗುತ್ತಿತ್ತು. ಈ ಎಲ್ಲವನ್ನೂ ಕೊರೊನಾ ಕಸಿದುಕೊಂಡಿದೆ. ಲಾಕ್‌ಡೌನ್ ಪರಿಣಾಮ ಬೆಳ್ಳಿ, ಬಂಗಾರದ ಅಂಗಡಿಗಳು ಬಂದ್ ಆಗಿ ಖರೀದಿಗೆ ಬ್ರೇಕ್ ಬಿದ್ದಿದೆ.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇ ಔಟ್‌ನಲ್ಲಿ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
30x55 East, 40 ಅಡಿ ರೋಡಿಗಿದೆ.
30x40 West, 50x100 East, 50x130 South, 30x50 West, 40x60 East, 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
ಮೊ. : 99166 12110

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
ಸ್ಫೂರ್ತಿ ಸೇವಾ ಟ್ರಸ್ಟ್
**ಪ್ರಸಾದ ದಾಸೋಹ**
ಇಂದಿನ ಪ್ರಸಾದ ವಿತರಕರು
ಲೇ|| ಶ್ರೀಮತಿ ಅಂದವಳ್ಳಿ ಸುಬ್ಬಮ್ಮ, ಸತ್ಯನಾರಾಯಣ ಮತ್ತು ಭಾಸ್ಕರ್‌ರಾವ್ ಕುಟುಂಬ, ಸರ್ವಂದ, ಬಳ್ಳಗಿರಿ ಕ್ಯಾಂಪ್, ಚನ್ನಗಿರಿ ತಾಲ್ಲೂಕು.
ಸ್ಥಳ : ಸಿ.ಜಿ. ಆಸ್ಪತ್ರೆ ಮುಂಭಾಗ, 12 ಗಂಟೆಗೆ ಮತ್ತು ಹೆರಿಗೆ ಆಸ್ಪತ್ರೆ ಮುಂಭಾಗ, 12.30ಕ್ಕೆ

ವಿದ್ಯಾನಗರ ದಾಟಿ
ಹೊಸ ಬನಶಂಕರಿ ಲೇ ಔಟ್‌ನಲ್ಲಿ
**ಸೈಟುಗಳು ಮಾರಾಟಕ್ಕಿವೆ**
42×65 East, 30×48 East, 30×40, 30×40 West ಅಕ್ಕಪಕ್ಕ 60×50 West, 30×40 West 40 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
ಮೊ. : 99166 12110

**ಸೈಟ್‌ಗಳು ಮಾರಾಟಕ್ಕಿವೆ**
ಶ್ರೀ ಬಸವ ಜಯಂತಿ, ಅಕ್ಷಯ ತೃತೀಯ ಅಂಗವಾಗಿ ಹರಿಹರ ಮತ್ತು ದಾವಣಗೆರೆಯಲ್ಲಿ ದೂಡಾ ಅಪ್ರೂವಲ್ ಆದ ಸೈಟ್‌ಗಳು ಮಾರಾಟಕ್ಕಿವೆ. ವಿಶೇಷ ಸುಲಭ ಕಂತುಗಳಲ್ಲಿ
Rs 14500/- , 899 sqft
98458 61220, 86603 11021, 93431 10009, 94481 55202

**ಮನೆ ಮಾರಾಟಕ್ಕಿದೆ**
ಉತ್ತರ ದಿಕ್ಕಿನ 30×40 ಅಳತೆಯ ಮನೆ, ಗ್ರೌಂಡ್‌ಫ್ಲೋರ್-2BHK with Balcony. 1ನೇ ಮಹಡಿ-2Rooms with attached Bath rooms. ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯದ ಜೊತೆ ಪಾರ್ಕಿಂಗ್ ವ್ಯವಸ್ಥೆ ಇರುವ ಸುಸಜ್ಜಿತ ಮನೆ ದಾವಣಗೆರೆ ವಿದ್ಯಾನಗರದ ವಿನಾಯಕ ಬಡಾವಣೆಯ 1ನೇ ಮೇನ್, 6ನೇ ಕ್ರಾಸ್ ಇಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ
ಮೊ: 9902220936
9008354153

**ಮಾರಾಟಕ್ಕಿದೆ**
3 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ.
ಬೆಳ್ಳೂಡಿ ಹತ್ತಿರ.
74112 50447

**1 ಎಕರೆ ಜಮೀನು ಮಾರಾಟಕ್ಕಿದೆ**
ದೊಗ್ಗಳ್ಳಿ, ಬಾತಿ, ಶಿವನಳ್ಳಿ, ಷಂಷೀಪುರ Etc...
74112 50447

**ಮಾರಾಟಕ್ಕಿದೆ**
2 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ.
@Rs. 26/Acre
74112 50447

**ಬೇಕಾಗಿದ್ದಾರೆ**
1) ಸ್ಟಾಫ್ ನರ್ಸ್‌ಗಳು
2) ಲ್ಯಾಬ್ ಟೆಕ್ನೀಷಿಯನ್
3) ಹಗಲು ಮತ್ತು ರಾತ್ರಿ ವಾಚ್‌ಮನ್‌ಗಳು
4) ಆಯಾ
ಸಂಪರ್ಕಿಸಿ : 98808 53626

**BUSINESS OPPORTUNITY**
No Investment, No Boss !! Work Part Time Earn Unlimited Income
99009 19091

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಟ್ರ್ಯಾಕ್ಟರ್ ಮಾರಾಟಕ್ಕಿವೆ**
MF-241, 2019 ಮಾಡೆಲ್‌ನ ಉತ್ತಮ ಕಂಡೀಷನ್‌ನಲ್ಲಿರುವ 1 ಟ್ರೈಲರ್ ಮತ್ತು 2 ಇಂಜಿನ್ ಟ್ರ್ಯಾಕ್ಟರ್ ಮಾರಾಟಕ್ಕಿವೆ.
97319 99977
88842 28109

**ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ಜ್ಯೋತಿಷ್ಯಾಲಯ**
**ಪಂಡಿತ್ ಚಂದ್ರಶೇಖರ್ ಗುರೂಜಿ**
ನಂಬರ್ ಒನ್ ವಶೀಕರಣ ಸ್ಪೆಷಲಿಸ್ಟ್
ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ದಾಂಪತ್ಯ ಸಮಸ್ಯೆ, ಸ್ತ್ರೀ-ಪುರುಷ ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿದ್ದರೂ 3ದಿನದಲ್ಲಿ ಶಾಶ್ವತ ಪರಿಹಾರ. ಆಗದಿದ್ದಲ್ಲಿ ಹಣ ವಾಪಸ್
ಮೊ: 99800 57857

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಡ್ರೈನೀಡಲ್ ಥೆರಪಿ ಮಾಡಲು SSLC or PUC ಆದ ಹೆಣ್ಣುಮಗಳು ಬೇಕಾಗಿದ್ದಾರೆ. ಉತ್ತಮ ಕಣ್ಣಿನ ದೃಷ್ಟಿ ಹಾಗೂ ಧೈರ್ಯ ಹೊಂದಿರಬೇಕು.
76767 50280

**ಬೇಕಾಗಿದ್ದಾರೆ**
ನುರಿತ ರೈಸ್‌ಮಿಲ್ ಡ್ರೈಯರ್ ಆಪರೇಟರ್ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
ಮೊ: 95918 04999
ಬಸವರಾಜ್: 96635 18383

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮನೆ ನೀರಿನ ತೊಟ್ಟಿಯನ್ನು ಸಿನ್ ಟ್ಯಾಂಕ್ ಮಿಷನ್‌ನಲ್ಲಿ ಕ್ಲೀನಿಂಗ್ ಮಾಡಲಾಗುತ್ತದೆ.**
99863 61250
91132 85992


# ಅವಕಾಶದ ವೇಳೆ ಕಾಣದ ನಿಯಮ

(1ನೇ ಪುಟದಿಂದ) ಕಾಪಾಡಿಕೊಳ್ಳದೇ ಮಾರುಕಟ್ಟೆಗಳಲ್ಲಿ ಬೇಕಾಬಿಟ್ಟಿಯಾಗಿ ಓಡಾಟ ನಡೆಸಿದ್ದಾರೆ. ಲಾಕ್‌ಡೌನ್ ಕಟ್ಟುನಿಟ್ಟಿನ ಪಾಲನೆಗೆ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್, ತಾಲ್ಲೂಕು ಆಡಳಿತ ಸಾಕಷ್ಟು ಶ್ರಮ ವಹಿಸಿದೆ. ಅಗತ್ಯ ವಸ್ತುಗಳ ಹೊರತುಪಡಿಸಿ ಉಳಿದೆಲ್ಲಾ ಅಂಗಡಿ-ಮುಂಗಟ್ಟುಗಳು ಬಂದ್ ಆಗಿದ್ದವು. ಜಿಲ್ಲಾ ಪೊಲೀಸ್ ನಿಂದ ರಸ್ತೆಗಳಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್‌ಗಳಿಂದ ಭಾಗಶಃ ವಾಹನಗಳ ಓಡಾಟಕ್ಕೆ ಬ್ರೇಕ್ ಬಿದ್ದಿತ್ತು. ಕೆಲ ವಾಹನಗಳ ಸಂಚಾರ ಅಲ್ಲಲ್ಲಿ ಕಂಡುಬಂದಿತು. ನಗರದ ಬಹುತೇಕ ಪ್ರಮುಖ ರಸ್ತೆಗಳು ಬಿಕೋ ಎನ್ನುತ್ತಿದ್ದವು.

## ಕೊರಟಿಕೆರೆ ಜಯ್ಯಣ್ಣ ನಿಧನ



ದಾವಣಗೆರೆ ವಿನೋಬನಗರ 2ನೇ ಮೇನ್, 3ನೇ ಕ್ರಾಸ್ ವಾಸಿ, ಕೊರಟಿಕೆರೆ ಜಯ್ಯಣ್ಣ (73) ಅವರು ದಿನಾಂಕ 13.5.2021ರ ಗುರುವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.5.2021ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

## ಶ್ರೀಮತಿ ಲಕ್ಷ್ಮಮ್ಮ ನಿಧನ



ದಾವಣಗೆರೆ ಎಸ್.ಎಸ್. ಲೇಔಟ್, ಬಂಟರ ಭವನದ ಹಿಂಭಾಗದ ವಾಸಿ ಹೆಚ್. ಆರ್. ಗೋವಿಂದ ಶೆಟ್ಟರ್‌ರವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮಮ್ಮ (69) ಅವರು, ದಿನಾಂಕ 14.05.2021 ರ ಶುಕ್ರವಾರ ರಾತ್ರಿ 9.38 ಕ್ಕೆ ಹೃದಯಾಘಾತದಿಂದ ನಿಧನರಾದರು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಅಳಿಯ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.05.2021 ರ ಶನಿವಾರ ಬೆಳಿಗ್ಗೆ 11.30 ಕ್ಕೆ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

# ಕೊರೊನಾ : ಮರೆಯಾಗುತ್ತಿರುವ ಮಹನೀಯರ ಜಯಂತಿಗಳು



**ಹರಪನಹಳ್ಳಿ**

ಹರಪನಹಳ್ಳಿ, ಮೇ 14- ಕೊರೊನಾದ ನೆಪದಲ್ಲಿ ವಿಶ್ವ ಮಹನೀಯರ ಜಯಂತಿಗಳನ್ನು ತಾಲ್ಲೂಕು ಆಡಳಿತ ಕಡೆಗಣಿಸುತ್ತಿದೆ.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ವಿಶ್ವದ ಮೊದಲ ಪ್ರಜಾಪ್ರಭುತ್ವದ ಜನಕ, ಮಹಾಮಾನವತಾವಾದಿ, ಸಮಾನತೆಯ ಸಂದೇಶ ಸಾರಿದ ಮಹಾಪುರುಷ ವಿಶ್ವಗುರು ಬಸವಣ್ಣನವರ 888ನೇ ಜಯಂತಿ ಮಹೋತ್ಸವವನ್ನು ತಾಲ್ಲೂಕು ಆಡಳಿತದಿಂದ ಸರಳವಾಗಿ ಆಚರಿಸಲಾಯಿತು.ಶಾಂತಿ, ಅಹಿಂಸೆ, ಸ್ವಾತಂತ್ರ್ಯ, ಅಸ್ಪೃಶ್ಯತೆ, ಸ್ತ್ರೀ ಸಮಾನತೆ ಸೇರಿದಂತೆ ಎಲ್ಲಾ ಪ್ರಗತಿಪರ ತತ್ವಗಳನ್ನು ಆಧುನಿಕ ಕಾಲಘಟ್ಟದಲ್ಲೇ ಜಾರಿಗೆ ತರಲು ವಿಶ್ವಗುರು ಬಸವಣ್ಣನವರು ಶ್ರಮಿಸಿದ್ದಾರೆ. ಸಾಮಾಜಿಕ ಸಮಾನತೆಯನ್ನು ಕಟ್ಟಲು ಪಣತೊಟ್ಟ ಅಂತಹ ಮಹನೀಯರ ಜಯಂತಿ ನೇಪಥ್ಯಕ್ಕೆ ಸೀಮಿತವಾಗಿರುವುದು ದುರಂತ.

# ಬಸವೇಶ್ವರ ಜಯಂತಿ ಆಚರಣೆ



**ಮಲೇಬೆನ್ನೂರು**

ಮಲೇಬೆನ್ನೂರು, ಮೇ 14- ಪುರಸಭೆ ಕಾರ್ಯಾಲ ಯದಲ್ಲಿ ವಿಶ್ವಗುರು, ಸಮಾನತೆಯ ಹರಿಕಾರ ಶ್ರೀ ಬಸವೇಶ್ವರರ ಜಯಂತಿಯನ್ನು ಆಚರಿಸಲಾಯಿತು. ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಮುಖ್ಯಾಧಿಕಾರಿ ದಿನಕರ್ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಸದಸ್ಯರಾದ ಬಿ. ಸುರೇಶ್, ಎ. ಆರೀಫ್ ಅಲಿ, ಮಂಜುಳಾ ಭೋವಿಕುಮಾರ್, ದಾದಾವಲಿ, ಯೂಸೂಫ್, ಎ.ಕೆ. ಲೋಕೇಶ್, ಪುರಸಭೆ ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ಮುಖಂಡರಾದ ಫಕ್ರುದ್ದೀನ್ ಅಹಮದ್, ಕಣ್ಣಾಳ್ ರವಿಕುಮಾರ್ ಇನ್ನಿತರರು ಹಾಜರಿದ್ದರು.

ನಾಡ ಕಛೇರಿಯಲ್ಲೂ ಬಸವ ಜಯಂತಿಯನ್ನು ಆಚರಿಸಲಾಯಿತು. ಉಪತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಶ್ರೀಧರ್ ಮೂರ್ತಿ, ಗ್ರಾಮ ಸಹಾಯಕ ಅಂಜಿನಮ್ಮ, ಬಸವರಾಜ್, ಹೇಮಂತ್ ಇನ್ನಿತರರಿದ್ದರು.


**ಭಾವಪೂರ್ಣ ಶ್ರದ್ಧಾಂಜಲಿ**



ಅಶಕ್ತ ಪೋಷಕ ಟ್ರಸ್ಟ್ ಮತ್ತು ಸಂಘದ ಟ್ರಸ್ಟಿಗಳು ಹಾಗೂ ನಿರ್ದೇಶಕರಾದ
**ಶ್ರೀ ಕಾಸಲ್ ವೆಂಕಟೇಶ್**
ವರ್ತಕರು, ದಾವಣಗೆರೆ.
ಇವರು ದಿ 12.05.2021ರ ರಾತ್ರಿ 11.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ಕರುಣಿಸಿ, ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.
ಅಧ್ಯಕ್ಷರು, ಕಾರ್ಯದರ್ಶಿಗಳು, ಟ್ರಸ್ಟಿಗಳು ಮತ್ತು ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ
ಅಶಕ್ತ ಪೋಷಕ ಟ್ರಸ್ಟ್ ಮತ್ತು ಸಂಘ, ಪಿ.ಬಿ. ರಸ್ತೆ, ದಾವಣಗೆರೆ

**ಎಂ.ಎಸ್. ಬಸವನಗೌಡ ನಿಧನ**



ದಾವಣಗೆರೆ ಸಿಟಿ ವಾಸಿ, ದಿ|| ಎಂ. ಶಿವಪ್ಪ ಅವರ ಸುಪುತ್ರ
**ಶ್ರೀ ಎಂ.ಎಸ್. ಬಸವನಗೌಡ**
ಅವರು ದಿನಾಂಕ 14.5.2021ರ ಶುಕ್ರವಾರ ಸಂಜೆ 6.20 ಗಂಟೆಗೆ ನಿಧನರಾದರು. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.5.2021ರ ಶನಿವಾರ ಬೆಳಿಗ್ಗೆ 9 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.
- ದುಃಖತಪ್ತ ಕುಟುಂಬ ವರ್ಗ

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 13.05.2021ರ ಗುರುವಾರ ನಿಧನರಾದ ದಾವಣಗೆರೆ ಕೊಟ್ಟೂರೇಶ್ವರ ಟೆಕ್ಸ್ ಟೈಲ್ಸ್ ಮಾಲೀಕರಾದ ಅಂದನೂರು ನಿರಂಜನ ಮುರುಗೇಂದ್ರ ಅವರ ಧರ್ಮಪತ್ನಿ
**ಶ್ರೀಮತಿ ಅಂದನೂರು ಸುವರ್ಣಮ್ಮ** ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಅಂದನೂರು ಬಳಗ (ರಿ.) ದಾವಣಗೆರೆ.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 14.05.2021ರಂದು ಅಕಾಲಿಕವಾಗಿ ನಿಧನರಾದ ನಮ್ಮ ಆತ್ಮೀಯರಾದ
**ಶ್ರೀ ಶಿವಣ್ಣ** (ಕೆಇಬಿ ಕ್ವಾರ್ಟಸ್)
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
✦ ಪ್ರಕಾಶ್ ವಿ.
ಗುಡ್ಡಿ ಬೀಡಾ ಸ್ಟಾಲ್, (ಮಾಲೀಕರು, SVT ಗ್ರೂಪ್ಸ್)
✦ ಎಸ್.ವಿ. ಸಂತೋಷ್‌ಕುಮಾರ್
ಎಸ್.ವಿ. ಟೂರ್ಸ್ & ಟ್ರಾವೆಲ್ಸ್
✦ ರಾಕೇಶ್ ಪಿ. ನಿಪ್ಪಾನ್ ಪೇಂಟ್ಸ್
ಎಸ್.ವಿ. ಟೂರ್ಸ್ & ಟ್ರಾವೆಲ್ಸ್ ಸಿಬ್ಬಂದಿ ವರ್ಗ ಹಾಗೂ ಸ್ನೇಹಿತರು.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 14.05.2021ರಂದು ಅಕಾಲಿಕವಾಗಿ ನಿಧನರಾದ ನಮ್ಮ ಆತ್ಮೀಯರಾದ
**ಶ್ರೀ ಶಿವಣ್ಣ** (ಕೆಇಬಿ ಕ್ವಾರ್ಟಸ್)
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
✦ ಸಿದ್ದೇಶ್, (ವಿನಾಯಕ ಇಂಡಸ್ಟ್ರೀಸ್)
✦ ಪ್ರಕಾಶ್ ವಿ. (SVT ಗ್ರೂಪ್ಸ್) ✦ ಕೊಟೇಶ್ ಜಿ.ಎನ್.
✦ ಜೆ.ಕೆ. ಮಹೇಶ್ ✦ ಉಮೇಶಣ್ಣ (ಗಣೇಶ ಹೋಟೆಲ್)
✦ ಚಂದ್ರಪ್ಪ (ಆಂಜನೇಯ ಟ್ರೇಡರ್ಸ್) ✦ ಅನಂತ್‌ಕುಮಾರ್
✦ ಜೈಪ್ರಕಾಶ್ (ಸ್ವಾಮಿ) ✦ ಮಿಲ್ಟ್ರಿ ಮಂಜಣ್ಣ
✦ ತಾಳದರ ರಾಜಣ್ಣ ✦ ನೀಲಕಂಠಪ್ಪ
✦ ರಾಮಣ್ಣ ಗುಜ್ಜರ್ ✦ ನಾಗೇಂದ್ರಪ್ಪ

**ಭಾವಪೂರ್ಣ ಶ್ರದ್ಧಾಂಜಲಿ**



ಡಾ. ರುದ್ರೇಶ್ ಸದಾಶಿವಪ್ಪ ಕುಂಬಾರ


ಸಾವಿನಲ್ಲೂ ಒಂದಾದ ತಂದೆ-ಮಗ



ಶ್ರೀ ಕೆ.ಜಿ. ಸದಾಶಿವಪ್ಪ

ದಿನಾಂಕ 24.04.2021ರಂದು ಅಕಾಲಿಕ ಮರಣ ಹೊಂದಿದ ಬೆಂಗಳೂರು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯದ ನಿವೃತ್ತ ಗ್ರಂಥಪಾಲಕರಾದ (ಪ್ರಭಾರ)
**ಡಾ. ರುದ್ರೇಶ್ ಸದಾಶಿವಪ್ಪ ಕುಂಬಾರ**
ಹಾಗೂ ದಿನಾಂಕ 26.04.2021ರಂದು ಅಕಾಲಿಕ ಮರಣ ಹೊಂದಿದ ಗುತ್ತಿಗೆದಾರರೂ, ದಾವಣಗೆರೆ ತಾಲ್ಲೂಕು ಬೋರ್ಡ್ ಮಾಜಿ ಸದಸ್ಯರಾಗಿದ್ದ **ಶ್ರೀ ಕೆ.ಜಿ. ಸದಾಶಿವಪ್ಪ**
ಅವರುಗಳಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
**ಬಂಧು-ಮಿತ್ರರು ಹಾಗೂ ಗ್ರಾಮಸ್ಥರು, ಕೊಡಗನೂರು, ದಾವಣಗೆರೆ ತಾಲ್ಲೂಕು.**


# ಗುಡ್ಡಪ್ಪ ನಿಧನಕ್ಕೆ ಕರವೇ ಸಂತಾಪ



ದಾವಣಗೆರೆ, ಮೇ 15- ಗಾಂಧಿ ನಗರದ ಡಿ.ಗುಡ್ಡಪ್ಪ ಇಂದು ನಿಧನರಾಗಿದ್ದು, ಅವರಿಗೆ ಕ.ರ.ವೇ ಜಿಲ್ಲಾಧ್ಯಕ್ಷ ರಾಮೇಗೌಡ ಖಜಾಂಚಿ ರವಿಕುಮಾರ್, ಗೋಪಾಲ್ ರಾಜ್, ಲೋಹಿತ್, ಎಂ.ಓಮೇಶ್, ಸಂತಾಪ ವ್ಯಕ್ತಪಡಿಸಿದ್ದಾರೆ.

# ಲಾಕ್‌ಡೌನ್ : ಸಚಿವರ ಇಂಗಿತ

(1ನೇ ಪುಟದಿಂದ) ಜನರ ಕಷ್ಟಗಳನ್ನು ತಿಳಿಯದೇ ಮನೆಯಲ್ಲೇ ಕುಳಿತು ಟ್ವೀಟ್ ಮಾಡುವ ಅಭ್ಯಾಸ ಮಾಡಿಕೊಂಡಿದ್ದಾರೆ ಎಂದು ಕಿಡಿಕಾರಿದರು.


**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

# ಸರಳ ಸಂಭ್ರಮದಿಂದ ರಂಜಾನ್

**(1ನೇ ಪುಟದಿಂದ) ಖರೀದಿಗೆ ಕತ್ತರಿ :** ಕಳೆದ ವರ್ಷದಂತೆ ಈ ವರ್ಷವೂ ಸಹ ಹೊಸ ಬಟ್ಟೆಯಿಂದ ವಂಚಿತರಾದ ಮುಸ್ಲಿಂ ಬಾಂಧವರು ಸಂಪ್ರದಾಯದಂತೆ ರಂಜಾನ್ ಹಬ್ಬಕ್ಕೆ ಹೊಸ ಬಟ್ಟೆ ಧರಿಸಿ, ಪ್ರಾರ್ಥನೆ ಸಲ್ಲಿಸುವುದು ವಾಡಿಕೆ. ಆದರೆ, ಈ ಬಾರಿಯ ಲಾಕ್‌ಡೌನ್, ಕರ್ಫ್ಯೂ ಸೇರಿದಂತೆ ಪೊಲೀಸ್ ಇಲಾಖೆಯ ಬಂದೋಬಸ್ತ್, ಕೊರೊನಾ ಮಾರ್ಗಸೂಚಿಯಿಂದಾಗಿ ಇತ್ತ ಬಟ್ಟೆ ಅಂಗಡಿ ತೆರೆಯಲಿಲ್ಲ. ಅತ್ತ ಮುಸ್ಲಿಂ ಬಾಂಧವರ ಖರೀದಿ ಇಲ್ಲ. ಹೀಗಾಗಿ ಈ ಹಿಂದೆ ಖರೀದಿಸಿದ ಬಟ್ಟೆಗಳನ್ನೇ ಮಕ್ಕಳು ಧರಿಸಿಕೊಂಡು ಸಂಭ್ರಮಿಸಿದ ದೃಶ್ಯ ನಗರದ ವಿವಿಧ ಪ್ರದೇಶಗಳಲ್ಲಿ ಸಾಮಾನ್ಯವಾಗಿತ್ತು.

**ನಮಾಜ್‌ಗೆ ಅವಕಾಶ, ಗುಸು ಗುಸು ಮಾತು :** ಖಾಸಗಿ ಟಿವಿಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಹೇಳಿದ್ದಾರೆ. ನಮಾಜ್‌ಗೆ ಅವಕಾಶ ಕಲ್ಪಿಸಲಾಗಿದೆ. ಹೀಗಿದ್ದರೂ ಕೆಲವು ಮಸೀದಿಗಳಲ್ಲಿ ಪ್ರಾರ್ಥನೆಗೆ ಅವಕಾಶ ನೀಡುತ್ತಿಲ್ಲವಲ್ಲ ಎಂದು ನಮಾಜ್‌ಗೆ ಬಂದಿದ್ದ ಅನೇಕ ಮುಸ್ಲಿಂ ಬಾಂಧವರು ಅಲ್ಲಲ್ಲಿ ನಿಂತು ಪಿಸು ಪಿಸು ಮಾತನಾಡಿಕೊಳ್ಳುತ್ತಿದ್ದರು. ಆದರೆ, ಯಾವುದೇ ಪತ್ರಿಕೆಗಳಲ್ಲಿ ಸುದ್ದಿ ಪ್ರಕಟಗೊಂಡಿಲ್ಲ ಎಂಬ ವಾದ ಒಂದು ಗುಂಪಿನದ್ದು ಆಗಿದ್ದರೆ, ಇನ್ನೊಂದು ಗುಂಪು ಇದು ಹಳೆಯ ವರದಿ ನಿಮಗೆ 'ಕನ್‌ಫ್ಯೂಸ್' ಆಗಿದೆ. ಅಷ್ಟೇ ಎಂದು ಸಮಜಾಯಿಷಿ ಉತ್ತರ ಅಲ್ಲಿ ಲಭ್ಯವಾಯಿತು. ಈ ವರದಿ ಕೊಂಚ ಕ್ಷಣ ದಿಗ್ಭ್ರಮೆ ಮೂಡಿಸಿತು. ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಪಿ.ಬಿ.ರಸ್ತೆ ಈದ್ಗಾ ಗೇಟಿನ ದೂರದಲ್ಲಿ ನಿಂತು ದೈವಾಧೀನರಾಗಿರುವ ಗುರು-ಹಿರಿಯರಿಗೆ 'ದುವಾ' ಮಾಡಿದರು.

ಬೆಳಿಗ್ಗೆ ಕ್ಷೀರ್ ಖುರ್ಮಾ (ಶ್ಯಾವಿಗೆ ಪಾಯಸ) ಸೇವಿಸಿ, ಪ್ರಾರ್ಥನೆ ಸಲ್ಲಿಸಿ, ಸಂಜೆ ಬಾಡೂಟ (ಬಿರಿಯಾನಿ) ಎಲ್ಲರ ಮನೆಯಲ್ಲಿ ಘಮ ಘಮಿಸುತ್ತಿತ್ತು. ಆದರೆ, ಬೀಗರು, ಸಂಬಂಧಿಕರು ಮನೆಗೆ ಆಗಮಿಸಲು ಕರ್ಫ್ಯೂ ಕಡಿವಾಣ ಹಾಕಿತ್ತಾದರೂ ಸ್ಥಳೀಯರು ಮಾತ್ರ ಅಲ್ಲಲ್ಲಿ ಸೇರಿಕೊಂಡರು ಪರ ಊರಿನವರ ಆಗಮನ ಕಡಿಮೆ ಇತ್ತು.

**ಮೊಬೈಲ್ ಮೂಲಕ ಶುಭಾಶಯ :** ಹಬ್ಬದ ಖುಷಿಯನ್ನು ಹಂಚಿಕೊಳ್ಳಲು ಮನೆ ಮನೆಗೆ ತೆರಳಿ ಗುರು-ಹಿರಿಯರ ಆಶೀರ್ವಾದ ಪಡೆಯುತ್ತಿದ್ದ ಮುಸ್ಲಿಂ ಬಾಂಧವರು ಕೊರೊನಾ ಮಾರ್ಗಸೂಚಿಗೆ ಸ್ಪಂದಿಸಿ, ಮೊಬೈಲ್ ಮೂಲಕವೇ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡರು. ಕೆಲವರಂತೂ ವಿಡಿಯೋ ಕಾಲ್ ಮೂಲಕ ಸಂತೋಷ ಹಂಚಿಕೊಳ್ಳುತ್ತಿದ್ದರು. ಪೋಷಕರು ನಿಟ್ಟುಸಿರು ಬಿಟ್ಟರೆ, ಯುವ ಪೀಳಿಗೆಗೆ ಪೊಲೀಸ್ ವಾಹನ ಗಸ್ತು ಮಾಡುವ ಮೂಲಕ ಅನಾವಶ್ಯಕ ಓಡಾಟಕ್ಕೆ ಬ್ರೇಕ್ ಹಾಕಿತ್ತು.

# ಹರಿದು ಹಂಚಿ ಹೋಗುತ್ತಿರುವ ವೀರಶೈವರು



**(1ನೇ ಪುಟದಿಂದ)** ಸಂಸ್ಕೃತಿ ಉಳಿಯುತ್ತದೆ. ಈ ನಿಟ್ಟಿನಲ್ಲಿ ವೀರಶೈವರು ಚಿಂತನೆ ಮಾಡಬೇಕು. ಧರ್ಮ, ಸಂಸ್ಕೃತಿ ಉಳಿಸಲು ಹಗಲಿರುಳು ಶ್ರಮಿಸಬೇಕೆಂದು ಕರೆ ನೀಡಿದರು.

ಶಿಲ್ಪಕಲೆಗಳಿಗೆ ಒತ್ತು ನೀಡಿರುವ ಈ ದೇವಸ್ಥಾನ ಇಂದಿನ ಯುವಕರಿಗೆ ಇತಿಹಾಸ ತಿಳಿಸಲಿದೆ. ಧರ್ಮಸ್ಥಳ, ಶೃಂಗೇರಿ, ಹೊರನಾಡು ಮಾದರಿಯಲ್ಲಿ ಪ್ರತಿ ನಿತ್ಯ ಇಲ್ಲಿ ಅನ್ನ ಸಂತರ್ಪಣೆಗೆ ಯೋಜನೆ ಸಿದ್ಧಪಡಿಸಿರುವ ವಿಷಯ ಕೇಳಿ ಸಂತೋಷವಾಗಿದೆ ಎಂದು ಹೇಳಿದ ಜಗದ್ಗುರುಗಳು, ದೇವಾಲಯದ ಧಾರ್ಮಿಕ ಕಾರ್ಯಗಳಿಗೆ 51 ಸಾವಿರ ರೂ. ಕಾಣಿಕೆ ನೀಡಿ, ಶುಭ ಹಾರೈಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಬೆನಕನಕೊಂಡಿ ಮನೆತನದವರು ಶ್ರಮವಹಿಸಿ ದುಡಿದ ಹಣವನ್ನು ಧಾರ್ಮಿಕ ಹಾಗೂ ಸಾಮಾಜಿಕ ಕೆಲಸಗಳಿಗೆ ನೀಡುವ ಮೂಲಕ ಮಾದರಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ದೇವಸ್ಥಾನದ ಟ್ರಸ್ಟಿ ಹಾಗೂ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ ಮಾತನಾಡಿ, ದೇವಾಲಯ ನಿರ್ಮಾಣಕ್ಕೆ ನೆರವು ನೀಡಿದ ಮಾಜಿ ಸಿ.ಎಂ. ಕುಮಾರಸ್ವಾಮಿ, ಸಂಸದ ಬಿ.ವೈ. ರಾಘವೇಂದ್ರ, ಸಚಿವರಾದ ಈಶ್ವರಪ್ಪ, ಭೈರತಿ ಬಸವರಾಜ್ ಸೇರಿದಂತೆ ಇನ್ನು ಅನೇಕರನ್ನು ನೆನೆದು ಕೃತಜ್ಞತೆ ಸಲ್ಲಿಸಿದರು.

ದೇವಸ್ಥಾನದ ಅಧ್ಯಕ್ಷ ಬಿ. ಪಂಚಪ್ಪ ಅಧ್ಯಕ್ಷತೆ ವಹಿಸಿದ್ದರು. ಹೊಸರಿತ್ತಿಯ ಶ್ರೀ ಗುದ್ದಲೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹೊನ್ನಾಳಿ ಹಿರೇಕಲ್ಮಠದ ಪುರೋಹಿತರು ಹೋಮ, ಹವನ ಹಾಗೂ ಧಾರ್ಮಿಕ ವಿಧಿ, ವಿಧಾನಗಳನ್ನು ನಡೆಸಿಕೊಟ್ಟರು. ಮಾಜಿ ಶಾಸಕ ಬಿ.ಪಿ. ಹರೀಶ್, ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪೂರಿ ರಂಗನಾಥ್, ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷ ಮಹಾಲಿಂಗಪ್ಪ, ಸದಸ್ಯೆ ಮಂಜುಳಾ ಭೋವಿಕುಮಾರ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ತಾ.ಪಂ. ಮಾಜಿ ಅಧ್ಯಕ್ಷ ಮಾಗಾನಹಳ್ಳಿ ಹಾಲಪ್ಪ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ರೈಸ್ ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ, ಬಿ. ಎಂ. ಹಾಲಸ್ವಾಮಿ, ಮುಖಂಡರಾದ ಪೂಜಾರ್ ಬಸಪ್ಪ, ಬಿ. ವೀರಯ್ಯ, ಡಾ. ಬಿ. ಚಂದ್ರಶೇಖರ್, ನಿಟ್ಟೂರು ಸಂಜೀವಮೂರ್ತಿ, ಕುಂಬಳೂರು ಗ್ರಾ.ಪಂ. ಅಧ್ಯಕ್ಷೆ ಲೀಲಾ ಶಿವಕುಮಾರ್, ಪಿಎಸ್ಐ ವೀರಬಸಪ್ಪ ಕುಸಲಾ ಪುರ, ಉಪ ತಹಶೀಲ್ದಾರ್ ಆರ್. ರವಿ, ಪುರಸಭೆ ಮುಖ್ಯಾಧಿಕಾರಿ ದಿನಕರ್, ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ. ನಾಗೇಂದ್ರಪ್ಪ, ಎನ್.ಕೆ.ವೃಷಬೇಂದ್ರಪ್ಪ, ಬಿ.ಮಹಾರುದ್ರಪ್ಪ, ಬಿ.ಮಲ್ಲಿಕಾರ್ಜುನ್, ಬಿ.ಉಮಾಶಂಕರ್, ಬಿ.ನಾಗೇಶ್, ಬಿ.ವಿ.ರುದ್ರೇಶ್, ಬಿ.ಶಂಭುಲಿಂಗಪ್ಪ, ಹೆಚ್.ಸಿ.ವಿಜಯಕುಮಾರ್, ಎನ್.ಕೆ.ಬಸವರಾಜ್ ಹಾಗೂ ಇನ್ನಿತರೆ ಗಣ್ಯರು ಭಾಗವಹಿಸಿದ್ದರು.

## 581 ಸೋಂಕಿತರು ಪತ್ತೆ

**(1ನೇ ಪುಟದಿಂದ)** ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ. ಜಿಲ್ಲೆಯಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 3,113ಕ್ಕೆ ತಲುಪಿದೆ. ದಾವಣಗೆರೆ ತಾಲ್ಲೂಕಿನಲ್ಲಿ 311 ಸೋಂಕಿತರು ಕಂಡು ಬಂದಿದ್ದಾರೆ. ಹರಿಹರದಲ್ಲಿ 98, ಜಗಳೂರಿನಲ್ಲಿ 27, ಚನ್ನಗಿರಿಯಲ್ಲಿ 53, ಹೊನ್ನಾಳಿಯಲ್ಲಿ 62 ಹಾಗೂ ಹೊರ ಜಿಲ್ಲೆಯ 30 ಸೋಂಕಿತರು ಕಂಡುಬಂದಿದ್ದಾರೆ.

# ಕೋವಿಡ್ ತಡೆಗೆ ಎಲ್ಲರೂ ಶಕ್ತಿ ಮೀರಿ ಕಾರ್ಯನಿರ್ವಹಿಸಿ



**(1ನೇ ಪುಟದಿಂದ)** ಗುಣಮುಖರಾಗಿ ಮನೆಯಲ್ಲಿ ವಿಶ್ರಾಂತಿಯಲ್ಲಿದ್ದು, ಮೂರ್ನಾಲ್ಕು ದಿನಗ ಳಲ್ಲಿ ಕ್ಷೇತ್ರಕ್ಕೆ ಬರಲಿದ್ದಾರೆ. ಯಾರೂ ಆತಂಕ ಪಡಬಾ ರದು. ಮನೆಯಲಿದ್ದರೂ ಸಹ ಅಧಿಕಾರಿಗಳೊಂದಿಗೆ, ನನ್ನೊಂದಿಗೆ, ಜಿಲ್ಲಾಧಿಕಾರಿಗಳೊಂದಿಗೆ ಕೋವಿಡ್ ಕುರಿತು ಚರ್ಚಿಸುತ್ತಿದ್ದಾರೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಹೋಂ ಐಸೋಲೇಷನ್‌ನಲ್ಲಿ ಪಟ್ಟಣದಲ್ಲಿ ಎಷ್ಟು ಜನರಿದ್ದಾರೆ? ಮನೆಯಲ್ಲಿ ಒಂದೇ ಕಡೆ, ಒಂದೇ ಸ್ನಾನದ ಮನೆ ಹಾಗೂ ಶೌಚಾಲಯ ಇದೆಯಾ ನೋಡಿದ್ದೀರಾ? ಎಂದು ಮುಖ್ಯಾಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆ, ಇಲ್ಲಾ ಸರ್ ಎಂಬ ಉತ್ತರಕ್ಕೆ ಗರಂ ಆದ ಜಿಲ್ಲಾಧಿಕಾರಿಗಳು ತಕ್ಷಣದಿಂದಲೇ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಕೋವಿಡ್ ಜನರ ಮನೆ ತಪಾಸಣೆ ನಡೆಸಿ ಒಂದೇ ಕಡೆ ವಾಸ ಇದ್ದದ್ದು ಕಂಡು ಬಂದರೇ ತಕ್ಷಣವೇ ಅಂತಹವರನ್ನು ಕೋವಿಡ್ ಕೇಂದ್ರಕ್ಕೆ ಸ್ಥಳಾಂತರಿಸಿ, ರೋಗ ಹರಡದಂತೆ ತಡೆಗಟ್ಟಬೇಕೆಂದು ಅಧಿಕಾರಿಗಳಿಗೆ, ಪೊಲೀಸ್ ಇಲಾಖೆಗೆ ಖಡಕ್ ಸೂಚನೆ ನೀಡಿದ ಅವರು ಎಎನ್‌ಎಂ, ಆಶಾ ಕಾರ್ಯಕರ್ತರಿಗೆ ತಕ್ಷಣವೇ ಮಾಸ್ಕ್, ಸ್ಯಾನಿಟೈಸರ್ ನೀಡುವಂತೆ ತಿಳಿಸಿದರು.

ತಹಶೀಲ್ದಾರ್ ನಾಗವೇಣಿ ಮಾತನಾಡಿ ಇದುವರೆಗೆ 464 ಕೋವಿಡ್ ರೋಗಿಗಳು ಇದ್ದು, 207 ಜನ ಗುಣ ಮುಖರಾಗಿದ್ದಾರೆ. 257 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. 6 ಜನರು ಮರಣ ಹೊಂದಿದ್ದಾರೆ. ಕೋವಿಡ್‌ಕೇರ್ ಸೆಂಟರ್‌ನಲ್ಲಿ 65 ಜನರಲ್ಲಿ 62 ಜನರು ಗುಣಮುಖರಾಗಿದ್ದು, ಮೂವರು ಚಿಕಿತ್ಸೆ ಪಡೆಯುತ್ತಿದ್ದಾರೆ. 60 ಜನರಲ್ಲಿ 50 ಜನರು ಆಕ್ಸಿಜನ್ ಪಡೆಯುತ್ತಿದ್ದು, ಉಳಿದ 10 ರೋಗಿಗಳು ಸಹ ಜಗಳೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ತಾಲ್ಲೂಕು ಮುಖ್ಯ ಆಡಳಿತಾಧಿಕಾರಿ ಡಾ. ನೀರಜ್, ಆಸ್ಪತ್ರೆಯ ಆಕ್ಸಿಜನ್, ವೆಂಟಿಲೇಟರ್ ಸೇರಿದಂತೆ ಇತರೆ ಸೌಲಭ್ಯಗಳ ಕುಂದು ಕೊರತೆ ಬಗ್ಗೆ ಮಾಹಿತಿ ನೀಡಿದರು. ಗ್ರಾಮೀಣ ಪ್ರದೇಶಗಳಲ್ಲಿನ ಕೋವಿಡ್ ಬಗ್ಗೆ ಇಓ ಮಲ್ಲನಾಯ್ಕ್ ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿ.ಪಂ. ಸಿಇಒ ವಿಜಯ್ ಮಾಂತೇಶ್ ದಾನಮ್ಮನವರ್, ಡಿಹೆಚ್ಓ ನಾಗರಾಜು ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಿರಿಯ ಪತ್ರಕರ್ತ ಮಹದೇವ ಪ್ರಕಾಶ್ ನಿಧನ



ಬೆಂಗಳೂರು, ಮೇ 14- ನಾಡಿನ ಹಿರಿಯ ಪತ್ರಕರ್ತರೂ ಆದ ಮುಖ್ಯಮಂತ್ರಿಗಳ ಬಿ.ಎಸ್. ಯಡಿಯೂರಪ್ಪ ಅವರ ಮಾಜಿ ಮಾಧ್ಯಮ ಕಾರ್ಯದರ್ಶಿ ಡಾ.ಮಹದೇವ ಪ್ರಕಾಶ್ ಅವರು ಕೊರೊನಾಗೆ ಸಿಲುಕಿ ಮೃತಪಟ್ಟಿದ್ದಾರೆ. ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಇಲ್ಲಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. 80 ರ ದಶಕದಲ್ಲಿ 'ಲೋಕವಾಣಿ' ಪತ್ರಿಕೆ ಸಂಪಾದಕರಾಗಿದ್ದ ಅವರು, ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನುಡಿ' ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದರು. 'ಈ ಭಾನುವಾರ' ವಾರಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ಕರ್ನಾಟಕದ ನಾಲ್ಕು ದಶಕಗಳ ರಾಜಕೀಯವನ್ನು ವಿಶ್ಲೇಷಿಸುವ ಪರಿಣಿತಿ ಪಡೆದಿದ್ದರು.

**ಸಂತಾಪ :** ಮಹದೇವ ಪ್ರಕಾಶ್ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಭಾವಿ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಚ್. ಎಸ್.ಮಂಜುನಾಥ್ ಕುರ್ಕಿ, ತಾಲ್ಲೂಕು ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ಬಿಜೆಪಿ ಹಿರಿಯ ಮುಖಂಡ ಎನ್. ಜಿ.ಪುಟ್ಟಸ್ವಾಮಿ, ಹಿರಿಯ ಪತ್ರಕರ್ತ ಕೆ.ಚಂದ್ರಣ್ಣ, ಬಸವಾಪಟ್ಟಣದ ಲೇಖಕ ಎಲ್.ಜಿ.ಮಧುಕುಮಾರ್ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ಐವರ್ ಮೆಕ್ಟಿನ್ ಬೇಡ

**(1ನೇ ಪುಟದಿಂದ)** ಅಮೆರಿಕದ ಔಷಧ ನಿಯಂತ್ರಣ ಸಂಸ್ಥೆಯಾದ ಯು.ಎಸ್.ಎಫ್.ಡಿ.ಎ.ಸಹ ಐವರ್‌ಮೆಕ್ಟಿನ್ ಬಳಕೆಯನ್ನು ವಿರೋಧಿಸಿದೆ.

ಈ ಔಷಧದ ಬಳಕೆಗೆ ಶಿಫಾರಸ್ಸು ಮಾಡಲು ಇನ್ನಷ್ಟು ಅಧ್ಯಯನಗಳು ನಡೆಯಬೇಕಿದೆ ಎಂದು ಹೈದರಾಬಾದ್‌ನ ಅಪೋಲೋ ಟೆಲಿ ಹೆಲ್ತ್‌ನ ಪ್ರಧಾನ ಸಲಹಾ ವೈದ್ಯ ರಚಿತ್ ಶ್ರೀವಾಸ್ತವ ಹೇಳಿದ್ದಾರೆ. ಈ ಔಷಧವನ್ನು ಕೊರೊನಾಗೆ ಬಳಸಲು ಮಾಹಿತಿ ಲಭ್ಯವಿಲ್ಲ ಎಂದು ಔಷಧದ ಜರ್ಮನ್ ಉತ್ಪಾದಕ ಮೆರ್ಕ್ ಸಹ ತಿಳಿಸಿದೆ.

ಕೊರೊನಾ ಸಂದರ್ಭದಲ್ಲಿ ವೈದ್ಯರು ಚಿಕಿತ್ಸೆಗಾಗಿ ಅಸಾಂಪ್ರದಾಯಿಕ ಮಾರ್ಗ ಅನುಸರಿಸುತ್ತಿದ್ದಾರೆ. ಆದರೆ, ಒಪ್ಪಿಗೆ ಇಲ್ಲದ ಇಲ್ಲವೇ ಪ್ರಯೋಗಕ್ಕೆ ಒಳಪಡದ ಔಷಧ ನೀಡುವುದು ಅಪಾಯಕಾರಿ ಎಂದು ದೆಹಲಿಯ ಕೌನ್ಸಿಲ್ ಫಾರ್ ಹೆಲ್ತ್‌ಕೇರ್ ಅಂಡ್ ಫಾರ್ಮಾದ ಅಧ್ಯಕ್ಷ ಗುರ್‌ಪ್ರೀತ್ ಸಂಧು ಹೇಳಿದ್ದಾರೆ.

## ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯ: ಲಾರಿ ಮಾಲೀಕರ ಖಂಡನೆ

ದಾವಣಗೆರೆ, ಮೇ 14- ಮಹಾರಾಷ್ಟ್ರ ರಾಜ್ಯಕ್ಕೆ ಅನ್ಯ ರಾಜ್ಯಗಳ ಸರಕು ಸಾಗಾಣೆ ವಾಹನಗಳು ಹೋಗಬೇಕಾದರೆ ಕೊರೊನಾ ನೆಗೆಟಿವ್ ವರದಿ ಇರಬೇಕೆಂಬ ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯಗೊಳಿಸಿರುವುದನ್ನು ರಾಜ್ಯ ಹಾಗೂ ಜಿಲ್ಲಾ ಲಾರಿ ಮಾಲೀಕರ ಮತ್ತು ಟ್ರಾನ್ಸ್‌ಪೋರ್ಟ್ ಏಜೆಂಟರ ಸಂಘವು ವಿರೋಧಿಸಿದೆ.

ಕೇಂದ್ರ ಸರ್ಕಾರದ ಹಾಗೂ ಅಖಿಲ ಭಾರತ ಮೋಟರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ ಅಗತ್ಯ ವಸ್ತುಗಳ ಪೂರೈಕೆ ಹಾಗೂ ವಿವಿಧ ಕಾರ್ಖಾನೆಗಳಿಗೆ ಬೇಕಾಗಿರುವ ಕಚ್ಚಾ ತೈಲ ಪೂರೈಸಲು ಸರಕು ಸಾರಿಗೆಗಳಿಗೆ ಅವಕಾಶ ನೀಡಿದೆ. ಆದರೆ ಬೇರೆ ರಾಜ್ಯಗಳಿಂದ ಸರಕು ವಾಹನಗಳು ಮಹಾರಾಷ್ಟ್ರಕ್ಕೆ ಬರಲು 48 ಗಂಟೆಗಳ ಒಳಗಾಗಿ ಮಾಡಿಸಿರುವ ಆರ್‌ಟಿಪಿಸಿಆರ್ ಪರೀಕ್ಷೆ ಕಡ್ಡಾಯಗೊಳಿಸಿರುವುದು ಸರಿಯಿಲ್ಲ. ಇದರಿಂದ ಪ್ರತಿ ಸರಕು ವಾಹನಗಳಿಗೆ ಪ್ರತಿ ಟನ್ ಗೆ ಸಾವಿರ ರೂ. ಹೆಚ್ಚಾಗಿ ಹೊರೆಯಾಗಲಿದೆ ಎಂದು ರಾಜ್ಯ ಸಂಘದ ಉಪಾಧ್ಯಕ್ಷ ಸೈಯದ್ ಸೈಫುಲ್ಲಾ ಖಂಡಿಸಿದ್ದಾರೆ.

ದೂರದಿಂದ ಬರುವುದು ಹಾಗೂ ತಾಂತ್ರಿಕ ತೊಂದರೆಯಾದರೆ, ಅನಿಯಮಿತ ಟೋಲ್ ಗಳ ನಿಲುಗಡೆ ಇವೆಲ್ಲವೂ ಮೀರಿ ಬೇರೆ ರಾಜ್ಯಗಳ ಸರಕು ವಾಹನಗಳು ಮಹಾರಾಷ್ಟ್ರಕ್ಕೆ ತಲುಪಬೇಕಾಗಿದೆ. ಅದರಲ್ಲೂ ಮಹಾರಾಷ್ಟ್ರದ ಮುಂಬಯಿ ನಗರವು ರಾಷ್ಟ್ರ ವಾಣಿಜ್ಯ ಕೇಂದ್ರ ಬಿಂದುವಾಗಿರುವುದರಿಂದ ವಾಹನಗಳ ದಟ್ಟಣೆ ಜಾಸ್ತಿ ಇರಲಿದ್ದು, ನಿಗದಿತ ಸಮಯದಲ್ಲಿ ತಲುಪುದು ಅನುಮಾನ. ಆಗ ಪುನಃ ಪರೀಕ್ಷೆ ಮಾಡಿಸುತ್ತಾ ಇರಲು ಹೇಗೆ ಸಾಧ್ಯ. ಕೂಡಲೇ ಈ ಸಂಕಷ್ಟದ ಸ್ಥಿತಿಗೆ ತಳ್ಳದೇ ಇದನ್ನು ವಾಪಸ್ ಪಡೆಯಬೇಕು ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿಗೆ ಒತ್ತಾಯಿಸಿದ್ದಾರೆ.

# ಸುಪ್ರೀಂನಲ್ಲಿ ಕೇಂದ್ರದ ಅರ್ಜಿ

**(1ನೇ ಪುಟದಿಂದ)** ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ರೂಪಿಸಿತ್ತು. ಈ ಆಯೋಗದಿಂದಾಗಿ ಕೇಂದ್ರ ಸರ್ಕಾರ ಮಾತ್ರ ಹಿಂದುಳಿದ ವರ್ಗಗಳನ್ನು ಗುರುತಿಸಬೇಕು ಹಾಗೂ ರಾಷ್ಟ್ರಪತಿಯಷ್ಟೇ ಈ ಪ ಟ್ಟಿಯ ಬಗ್ಗೆ ಅಧಿಸೂಚನೆ ಹೊರಡಿಸಬೇಕು ಎಂದು ನ್ಯಾಯಾಲಯ ತಿಳಿಸಿದೆ.

ಗುರುವಾರ ಕೇಂದ್ರ ಸರ್ಕಾರ ಮರು ಪರಿಶೀಲನಾ ಅರ್ಜಿ ದಾಖಲಿಸಿದೆ. ಈ ವಿಷಯದ ಬಗ್ಗೆ ತೆರೆದ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಬೇಕು ಹಾಗೂ ಬಹುಮತದ ತೀರ್ಪನ್ನು ತಡೆಯಬೇಕು ಎಂದು ಕೇಳಿದೆ.

ಕೇಂದ್ರ ಸರ್ಕಾರ ತಿದ್ದುಪಡಿ ತಂದಿರುವ ಕಾರಣದಿಂದಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವ ರಾಜ್ಯಗಳ ಹಕ್ಕುಗಳನ್ನು ಕಸಿದುಕೊಂಡಿಲ್ಲ, ಇಲ್ಲವೇ ಒಕ್ಕೂಟ ವಿನ್ಯಾಸವನ್ನು ಉಲ್ಲಂಘಿಸಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಬಹುಮತದ ತೀರ್ಪು ನೀಡಿದ್ದ ನ್ಯಾಯಮೂರ್ತಿಗಳಾದ ಎಲ್. ನಾಗೇಶ್ವರರಾವ್, ಹೇಮಂತ್ ಗುಪ್ತ ಹಾಗೂ ಎಸ್. ರವೀಂದ್ರ ಭಟ್, ಕೇಂದ್ರ ಸರ್ಕಾರಕ್ಕೆ ಮಾತ್ರ ಹಿಂದುಳಿದ ವರ್ಗಗಳ ಗುರುತಿಸುವ ಅಧಿಕಾರ ಇದೆ ಎಂದು ತಿಳಿಸಿತ್ತು. ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್ ಹಾಗೂ ಎಸ್. ಅಬ್ದುಲ್ ನಜೀರ್ ಅವರು ಪ್ರತ್ಯೇಕ ತೀರ್ಪು ನೀಡಿ, ಸಂವಿಧಾದ ತಿದ್ದುಪಡಿಯಂತೆ ಕೇಂದ್ರ ಹಾಗೂ ರಾಜ್ಯಗಳೆರಡೂ ಹಿಂದುಳಿದ ವರ್ಗಗಳನ್ನು ಗುರುತಿಸಬಹುದು ಎಂದು ತಿಳಿಸಿದ್ದರು.

## ಹರಪನಹಳ್ಳಿಯಲ್ಲಿ ರಂಜಾನ್ ಆಚರಣೆ



ಹರಪನಹಳ್ಳಿ, ಮೇ 14- ಕೊರೊನಾ 2ನೇ ಅಲೆ ದಿನದಿಂದ ದಿನಕ್ಕೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸೋಂಕನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಮುಂಜಾಗ್ರತಾ ಕ್ರಮವಾಗಿ ರಾಜ್ಯ ಸರ್ಕಾರ ಲಾಕ್‌ಡೌನ್ ಘೋಷಿಸಿದ ಪರಿಣಾಮ ಕಳೆದ ವರ್ಷದ ಹಾಗೆ ಈ ವರ್ಷವೂ ಸಹ ಮುಸ್ಲಿಂ ಬಾಂಧವರು ರಂಜಾನ್ ಹಬ್ಬವನ್ನು ಮನೆಯಲ್ಲಿಯೇ ಸರಳವಾಗಿ ಆಚರಿಸಿದ್ದಾರೆ.

ಪಟ್ಟಣದ ಪುರಸಭೆ ಸದಸ್ಯ ಜಾಕೀರ್ ಹುಸೇನ್ ಸರ್ಖಾವಸ್ ಅವರೂ ಸಹ ಕೊರೊನಾ ಹಿನ್ನೆಲೆಯಲ್ಲಿ ಮಸೀದಿಗೆ ತೆರಳದೆ ತಮ್ಮ ಮನೆಯಲ್ಲಿಯೇ ಕುಟುಂಬ ಪರಿವಾರದವರ ಜೊತೆ ಶ್ವೇತ ವರ್ಣದ ಉಡುಪು ಧರಿಸಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ನಮಾಜ್ ಮಾಡಿ (ಪ್ರಾರ್ಥನೆ) ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ನಿವೃತ್ತ ಮುಖ್ಯ ಶಿಕ್ಷಕ ಜೆ.ಎಂ.ಸರ್ಖಾವಸ್, ಪುರಸಭೆ ಸದಸ್ಯ ಜಾಕೀರ್ ಹುಸೇನ್ ಸರ್ಖಾವಸ್, ಖಾಜೀ ಮುಸ್ತಾಕ್ ಆಮದ್ ರಜ್ವಿ ತಂಜೀಮ್ ಉಲೇಮಾ-ಹಿ-ಅಲ್ಲೇ ಸುನತ್ ಹರಪನಹಳ್ಳಿ, ಅಲ್ಪಸಂಖ್ಯಾತರ ಘಟಕದ ತಾಲ್ಲೂಕು ಅಧ್ಯಕ್ಷ ಎ.ಮೂಸಾಸಾಬ್ ಅವರುಗಳು ಮಾತನಾಡಿದರು.

## ಹೆಚ್ಚಿದ ಶವಗಳು

**(1ನೇ ಪುಟದಿಂದ)** ಹಿಂದೆಂದೂ ಕಾಣದಷ್ಟು ಶವಗಳು ಬರುತ್ತಿವೆ. ಹಗಲೂ ರಾತ್ರಿ ಶವಗಳ ಅಂತ್ಯಕ್ರಿಯೆ ನಡೆಯುತ್ತಿದೆ ಎಂದು ವಿದ್ಯುತ್ ಚಿತಾಗಾರದ ಪ್ರಧಾನ ಸಂಯೋಜಕ ಸುಭಾಷ್ ಕರ್ಕಿ ಹೇಳಿದ್ದಾರೆ. ಇಲ್ಲಿನ ಒಂದು ಯಂತ್ರ ಕೆಟ್ಟಿದ್ದರೆ, ಇನ್ನೊಂದರಲ್ಲಿ ಶವಗಳ ದಹನ ಸಾಧ್ಯವಾಗುತ್ತಿಲ್ಲ. ಹೀಗಾಗಿ 16 ಹೊಸ ಚಿತೆಗಳನ್ನು ಭಾಗಮತಿ ನದಿ ದಡದಲ್ಲಿ ರೂಪಿಸಲಾಗಿದೆ. 35 ಚಿತೆಗಳು ಒಳಾಂಗಣದಲ್ಲಿವೆ.

ಈ ಹಿಂದೆ ಹೆಚ್ಚೆಂದರೆ 80 ಮೃತದೇಹಗಳು ಬರುತ್ತಿದ್ದವು. ಮಂಗಳವಾರ ಅದು 110ಕ್ಕೆ ತಲುಪಿದೆ. ನಮ್ಮ 35 ಸಿಬ್ಬಂದಿ ಅಂತ್ಯಕ್ರಿಯೆಯಲ್ಲಿ ತೊಡಗಿದ್ದಾರೆ. ನೇಪಾಳ ಸೈನ್ಯವೂ ನೆರವು ನೀಡುತ್ತಿದೆ. ಪರಿಸ್ಥಿತಿ ಹೀಗೆಯೇ ಆದರೆ ಕಟ್ಟಿಗೆಗಳ ಕೊರತೆಯಾಗಲಿದೆ ಎಂದು ಕರ್ಕಿ ತಿಳಿಸಿದ್ದಾರೆ.

ದೇಶದಲ್ಲಿ ಕೊರೊನಾ ತೀವ್ರತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಭಾರತೀಯರೂ ಸೇರಿದಂತೆ 7 ಸಾವಿರಕ್ಕೂ ಹೆಚ್ಚು ಜನರನ್ನು ತೆರವುಗೊಳಿಸಲು ನಿರ್ಧರಿಸಲಾಗಿದೆ.

ನೇಪಾಳಕ್ಕೆ ಪ್ರವಾಸಕ್ಕಾಗಿ ಬಂದಿದ್ದ ಜನರು ಕೊರೊನಾ ನಂತರ ಹೇರಲಾದ ಎರಡು ವಾರಗಳ ಲಾಕ್‌ಡೌನ್‌ನಿಂದಾಗಿ ಅಲ್ಲೇ ಸಿಲುಕಿದ್ದಾರೆ. ವಿದೇಶಿ ರಾಯಭಾರಿಗಳೂ ಸಹ ಅತಂತ್ರರನ್ನು ವಾಪಸ್ ಕರೆಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ.

## ಪ್ರತಿ ಡೋಸ್ ಲಸಿಕೆ ಬೆಲೆ 995 ರೂ.

**(1ನೇ ಪುಟದಿಂದ)** ಭಾರತದಲ್ಲಿರುವ ಆರು ಉತ್ಪಾದನಾ ಸಹಭಾಗಿಗಳ ಜೊತೆ ಕಾರ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಲಾಗಿದೆ.

ಭಾರತದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದರ ವಿರುದ್ಧ ಹೋರಾಡಲು ಲಸಿಕೆ ಪರಿಣಾಮಕಾರಿ ಅಸ್ತ್ರವಾಗಿದೆ. ಭಾರತದಲ್ಲಿ ಲಸಿಕೆ ವಿತರಣೆಗೆ ಕೊಡುಗೆ ನೀಡುವುದು ನಮ್ಮ ಅತಿ ದೊಡ್ಡ ಆದ್ಯತೆಯಾಗಿದೆ ಎಂದು ಡಾ. ರೆಡ್ಡೀಸ್ ಸಹ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜಿ.ವಿ. ಪ್ರಸಾದ್ ತಿಳಿಸಿದರು.

ಪ್ರಸಕ್ತ ಭಾರತದಲ್ಲಿ ಎರಡು ಲಸಿಕೆಗಳನ್ನು ಮಾತ್ರ ನೀಡಲಾಗುತ್ತಿದೆ. ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಹಾಗೂ ಸೆರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗಳು ಕೋವಿಶೀಲ್ಡ್‌ಗಳನ್ನು ಉತ್ಪಾದಿಸುತ್ತಿವೆ.

ಬರುವ ಆಗಸ್ಟ್‌ನಿಂದ ಡಿಸೆಂಬರ್ ನಡುವೆ 216 ಕೋಟಿ ಡೋಸ್‌ಗಳು ಲಭ್ಯವಾಗಲಿವೆ ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪೌಲ್ ತಿಳಿಸಿದ್ದಾರೆ.

ಸ್ಪುಟ್ನಿಕ್ ಲಸಿಕೆಯನ್ನು ತುರ್ತು ಸ್ಥಿತಿಯಲ್ಲಿ ಬಳಸಲು ಡಾ. ರೆಡ್ಡೀಸ್‌ಗೆ ಔಷಧ ನಿಯಂತ್ರಕ ಡಿ.ಸಿ.ಜಿ.ಐ. ಏಪ್ರಿಲ್ ತಿಂಗಳಲ್ಲಿ ಅನುಮತಿ ನೀಡಿತ್ತು.

ರಷ್ಯಾದ ಆರ್.ಡಿ.ಐ.ಎಫ್. ಜೊತೆ ಕೈ ಜೋಡಿಸಿ ಡಾ. ರೆಡ್ಡೀಸ್ ಸ್ಪುಟ್ನಿಕ್ ವಿ ಪ್ರಯೋಗವನ್ನು ಭಾರತದಲ್ಲಿ ನಡೆಸಿದೆ. ಸ್ಪುಟ್ನಿಕ್ ಅನ್ನು ಎರಡು ಡೋಸ್‌ಗಳಲ್ಲಿ ನೀಡಲಾಗುವುದು. ಇದು ಶೇ.91.6ರಷ್ಟು ಪರಿಣಾಮಕಾರಿ ಎಂದು ಲ್ಯಾನ್ಸೆಟ್ ನಿಯತಕಾಲಿಕದ ವರದಿಯಲ್ಲಿ ತಿಳಿಸಲಾಗಿದೆ.

## ರಸ್ತೆಗಿಳಿದ 73 ವಾಹನಗಳ ವಶ ಮಾಸ್ಕ್ ಧರಿಸದ 266 ಮಂದಿಗೆ ದಂಡ

ದಾವಣಗೆರೆ, ಮೇ 14- ಲಾಕ್ ಡೌನ್ ನಿಯಮ, ಬಿಗಿ ಬಂದೋಬಸ್ತ್ ನಡುವೆಯೂ ಕುಂಟು ನೆಪ ಹೇಳಿಕೊಂಡು, ಕಣ್ತಪ್ಪಿಸಿ ರಸ್ತೆಗಿಳಿದ 73 ವಾಹನಗಳನ್ನು ಪೊಲೀಸರು ಮುಲಾಜಿಲ್ಲದೇ ಜಪ್ತು ಮಾಡಿ, ಅವುಗಳ ಮಾಲೀಕರ ವಿರುದ್ಧ ಸೂಕ್ತ ಕ್ರಮ ಕೈಗೊಂಡಿದ್ದಾರೆ. ಪೊಲೀಸರು ಎಂದಿನಂತೆ ವಾಹನಗಳನ್ನು ಪೊಲೀಸ್ ಕವಾಯಿತು ಮೈದಾನಕ್ಕೆ ರವಾನಿಸಿದರು. ಅಲ್ಲದೇ ಮಾಸ್ಕ್ ಧರಿಸದ 266 ಮಂದಿಯಿಂದ 37,250 ರೂ. ದಂಡ ವಿಧಿಸಿದ್ದಾರೆ.

# ಹಿರಿಯ ನಾಗರಿಕರಿಗೆ ವ್ಯವಸ್ಥಿತವಾಗಿ ಲಸಿಕೆ ನೀಡುವಿರಾ ?

ಓದುಗರ ಪತ್ರ

**ಮಾನ್ಯ ಡಿ.ಸಿ. ಸಾಹೇಬ್ರೇ,**

ನಾವು ಮುಂಜಾನೆದ್ದು ವಾರಪೂರ್ತಿ ದೂರದ ಜಿಲ್ಲಾಸ್ಪತ್ರೆಗೆ ಹೋಗಿ ಗಂಟೆಗಟ್ಟಲೆ ಕೂರಲೂ, ನಿಲ್ಲಲೂ ಆಗದೆ ಇರುವ ನೋವುಗಳನ್ನು ಸಹಿಸಿಕೊಂಡು ಕ್ಯೂನಲ್ಲಿ ನಿಂತರೂ ಎರಡನೇ ಲಸಿಕೆ ಸಿಗದೆ ವಾಪಸ್ಸಾಗುತ್ತಿರುವ ಸುದ್ದಿ ಪತ್ರಿಕೆಗಳಲ್ಲಾದರೂ ಓದಿರುತ್ತೀರಿ.

ನಲವತ್ತೈದು ವರ್ಷ ಮೇಲ್ಪಟ್ಟವರಿಗೆ 2ನೇ ಲಸಿಕೆ ಹಾಕಲಾಗುತ್ತೆ ಎಂದು ಹೇಳಿದ್ದಕ್ಕೆ ತಾನೇ ನಾವುಗಳೆಲ್ಲಾ ಎದ್ದೆವೋ-ಬಿದ್ದೆವೋ ಎಂದು ಓಡಿಹೋಗಿ ಕ್ಯೂನಲ್ಲಿ ನಿಂತದ್ದು. ಆದರೀಗ 'ಲಸಿಕೆಯ ಪೂರೈಕೆಯೇ ಇಲ್ಲವಂತೆ' ಎನ್ನುವ ಸುದ್ದಿ ನಿಮಗಂತೂ ಮೊದಲೇ ಗೊತ್ತಿರಬೇಕು. ಅದರಲ್ಲೂ ಕೋವ್ಯಾಕ್ಸಿನ್ ಅನ್ನೋ ಲಸಿಕೆ ಇನ್ನೂ ಸರಬರಾಜು ಆಗುವುದೇ ಅನುಮಾನ ಎಂದು ಹೇಳಲಾಗುತ್ತಿದೆ. ಮೊದಲಿಗೆ ವೃದ್ಧರು ಲಸಿಕೆ ಹಾಕಿಸಿಕೊಳ್ಳುವಂತೆ ಸರ್ಕಾರ, ನಿಮ್ಮ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆಗಳು ಗೋಗರೆದಿರಿ. ಈಗ ನೋಡಿ ಎರಡನೆ ಲಸಿಕೆ ಹಾಕಿಸಿ ಕೊಳ್ಳುವ ಸಮಯ ಮೀರಿದರೂ ಲಸಿಕೆಯೇ ಇಲ್ಲವೆಂದು ನಿಮ್ಮ ಇಲಾಖೆಗಳು ಕೈ ಕೊಡವಿ ಕೊಂಡರೆ ನಮ್ಮ ಗತಿ ಏನು? ಆಗ ನೀವು ಲಸಿಕೆ ಹಾಕಿಸಿಕೊಳ್ಳಿ ಎಂದು ಗೋಗರೆದಿರಿ, ಈಗ ನಮ್ಮನ್ನು ಗೋಳು ಹೊಯ್ದುಕೊಳ್ಳುವ ಅವಕಾಶ ನಿಮ್ಮದಾಗಿದೆ. ಜನರು ಮಾಸ್ಕ್ ಹಾಕುತ್ತಿಲ್ಲ, ಲಾಕ್‌ಡೌನ್ ಸಮಯದಲ್ಲಿ ಜನ ಓಡಾಡುವುದನ್ನು ಕಂಡು ಚಡಪಡಿಸಿ ಬೀದಿಗಿಳಿಯ ಬಲ್ಲ ನೀವು ಈ ನಗರದ ವೃದ್ಧರು ಎರಡನೇ ಲಸಿಕೆ ಸಿಗದೇ ಚಡಪಡಿಸುವುದನ್ನು ಕಂಡು ಮರುಗಬಾರದೇ?

ಈಗಾಗಲೇ ಕೋವ್ಯಾಕ್ಸಿನ್ ಹಾಕಿಸಿಕೊಂಡು, ಎರಡನೇ ಡೋಸ್ ಹಾಕಿಸಿ ಕೊಳ್ಳುವ ಸಮಯ ಮೀರಿದವರು ಏನು ಮಾಡಬೇಕು, ಅವರಿಗೆ ಪರ್ಯಾಯ ಏನೆಂಬುದನ್ನು ಹೇಳುವವರು ಯಾರು? ಈ ಜಿಲ್ಲೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿ ಎಂಬುವವರು ಇದ್ದಾರೆಯೇ, ಇಲ್ಲವೇ? ಎಂಬುದು ಗೊತ್ತಾಗುತ್ತಿಲ್ಲ. ಅಕಸ್ಮಾತ್ ಸದರಿ ಲಸಿಕೆ ಬಾರದೇ ಹೋದರೆ ಮೊದಲ ಡೋಸ್ ಹಾಕಿಸಿಕೊಂಡವರ ಹಣೆಬರಹವನ್ನು ಅದೃಷ್ಟಕ್ಕೇ ಬಿಡಲಾಗಿದೆ ಎಂದು ತಿಳಿಯೋಣವೇ ಎಂದರೆ ಅದೂ ಗೊತ್ತಾಗುತ್ತಿಲ್ಲ. ಹೇಗೂ ವೃದ್ಧರ ಬಗ್ಗೆ ಗಾದೆಯೇ ಇದೆ, "ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ" ಅಂತ. ಹಾಗಂತ ಕಾಡಿಗೆ ಹೋಗಲಿ ಬಿಡಿ ಅನ್ನುವ ಉದ್ದೇಶ ಜಿಲ್ಲೆಯ ಆರೋಗ್ಯ ಇಲಾಖೆಗೆ ಇಲ್ಲತಾನೇ?

ಡಿ.ಸಿ.ಸಾಹೇಬರೇ, ದುಗುಡ ಆತಂಕ ಇಷ್ಟೆಲ್ಲಾ ಬರೆಯಲು ಪ್ರಚೋದಿಸಿದೆ.ಪಾಪ ನನ್ನಂತಹ ಬಹಳಷ್ಟು ವಯೋವೃದ್ದರು ಆತಂಕದಿಂದ ದಿನ ದೂಡುವುದನ್ನು ಮನಗಂಡು ಏನಾದರೂ ಪರ್ಯಾಯ ವ್ಯವಸ್ಥೆ ಮಾಡುವ ನಂಬಿಕೆ ನಮಗಿದೆ.ಏನಾದರೊಂದು ಮಾಡಿ.

**- ಇಮ್ತಿಯಾಜ್ ಹುಸೇನ್**, ದಾವಣಗೆರೆ.


KSS Foundation (R.) Davanagere.

**KSS PU COLLEGE**
**(SCIENCE & COMMERCE)**

**ಬೇಕಾಗಿದ್ದಾರೆ**

ಈ ಕೆಳಗೆ ತಿಳಿಸಿದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅಗತ್ಯ ದಾಖಲೆಗಳೊಂದಿಗೆ ಈ ಜಾಹೀರಾತು ಪ್ರಕಟವಾದ ಒಂದು ವಾರದ ಒಳಗೆ ಮೇಲಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಅಥವಾ ಖುದ್ದಾಗಿ ಸಂಪರ್ಕಿಸಲು ಕೋರಲಾಗಿದೆ.

ಜಾಹೀರಾತು ಸಂಖ್ಯೆ : 02 / ಕೆ.ಎಸ್.ಎಸ್. ಪ.ಪೂ. / ದಿನಾಂಕ 14/05/2021

| ಕ್ರ.ಸಂ. | ಹುದ್ದೆಗಳ ವಿವರ | ಸಂಖ್ಯೆ | ವಿದ್ಯಾರ್ಹತೆ | ಅನುಭವ |
|---|---|---|---|---|
| 1 | Principal | 1 | MA / MSc. B.Ed. | 7 to 10 Years<br>6 to 10 Years |
| 2 | Academic Co-ordinator / PRO | 2 | MA / MSc. B.Ed. | 6 to 10 Years<br>6 to 10 Years |
| 3 | Physics Lecturer | 2 | M.Sc. B.Ed. | 6 to 10 Years |
| 4 | Chemistry Lecturer | 2 | M.Sc. B.Ed. | 6 to 10 Years |
| 5 | Maths Lecturer | | M.Sc. B.Ed. | 6 to 10 Years |
| 6 | Botany Lecturer | 2 | M.Sc. B.Ed. | 6 to 10 Years |
| 7 | Zoolagy Lecturer | 2 | M.Sc. B.Ed. | 6 to 10 Years |
| 8 | Commerce Lecturer | 4 | M.Com., B.Ed. | 6 to 10 Years |
| 9 | English Lecturer | 1 | M.A. B.Ed. | 6 to 10 Years |
| 10 | Computer Lecturer | 1 | M.Sc. C.S | 6 to 10 Years |
| 11 | Librarian | 1 | M.lib | 6 to 10 Years |
| 12 | Physical Edn. Teacher | 1 | MP. Ed | 7 to 10 Years |
| 13 | (ವಸತಿ ಸೌಲಭ್ಯಕ್ಕಾಗಿ) | Male-1, | B.A./B.Sc. B.Ed. | 3 Year |
| | Hostel Warden | Female-2 | B.A./B.Sc. | |
| 14 | Cooks for Residential | 2 | | 3 Year |
| 15 | Cooking Assistance | 4 | Experience in asst. Cooking | 2 Years |

ರೋಸ್ಟರ್ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು.
(NEET, JEE, AIIMS, CET & KVPY ಪರೀಕ್ಷೆಗಳಿಗೆ ತರಬೇತಿ ಕೊಡಲು ಸಮರ್ಥರಿರಬೇಕು)
ವೇತನ ಶ್ರೇಣಿ : ಉಪನ್ಯಾಸಕರುಗಳಿಗೆ ರೂ. 75,000 ರಿಂದ 1,50,000 ವರೆಗೆ ಹಾಗೂ
ಬೋಧಕೇತರ ಸಿಬ್ಬಂದಿಗಳಿಗೆ ರೂ, 15,000 ರಿಂದ 30,000 ದ ವರೆಗೆ

ಹೆಚ್.ಕೆ. ಬಸವರಾಜ್, MBA-Em. ಕಾರ್ಯದರ್ಶಿಗಳು
ಎಂ. ಹೇಮಲತ, M.Sc. B.Ed., ಪ್ರಾಂಶುಪಾಲರು
ಸಿ.ಹೆಚ್. ಹಿರೇಗೌಡರ್, B.Sc. LL.B. ನಿರ್ದೇಶಕರು (ಆಡಳಿತ)

Address : # 1382/5, 6, 'Mathrukrupa' 2nd Cross, Sararaswathi Nagar, Davangere - 577 004.
Ph. : 9008487807, 9035110629, 9880127276, 08192-262904, 9845781788
E-mail : kss.foundation@rediffmail.com
Web : www.kssfoundationdvg.org

# ಕಾಂಗ್ರೆಸ್ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಲಸಿಕೆಗೆ 100 ಕೋಟಿ ರೂ.

ಬೆಂಗಳೂರು, ಮೇ 14 - ಕಾಂಗ್ರೆಸ್‌ನ ವಿಧಾನಸಭಾ, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಸದರ ಪ್ರದೇಶಾಭಿವೃದ್ಧಿ ನಿಧಿಯಿಂದ 100 ಕೋಟಿ ರೂ. ಹಣವನ್ನು ಲಸಿಕೆ ಖರೀದಿಗೆ ನೀಡಲು ತೀರ್ಮಾನಿಸಿದ್ದೇವೆ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಪ್ರಕಟಿಸಿದ್ದಾರೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಜನಪ್ರತಿನಿಧಿಗಳಿಗೆ ಮಂಜೂರು ಮಾಡುವ ಪ್ರದೇಶಾಭಿವೃದ್ಧಿ ನಿಧಿಯಿಂದ ಪ್ರತಿ ಸದಸ್ಯರು ತಲಾ ಒಂದು ಕೋಟಿ ರೂಪಾಯಿಗಳನ್ನು ಹಣವನ್ನು ನೀಡಲಿದ್ದಾರೆ ಎಂದರು.

ದೇಶದ ಪ್ರತಿಯೊಬ್ಬರಿಗೂ ಕೊರೊನಾ ಲಸಿಕೆ ನೀಡುವುದೇ ಸೋಂಕು ತಡೆಗಟ್ಟಲು ಇರುವ ಪರಿಣಾಮಕಾರಿ ಮಾರ್ಗವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇಷ್ಟರೊಳಗೆ ಕನಿಷ್ಠ ಅರ್ಧದಷ್ಟು ಜನರಿಗೆ ಲಸಿಕೆ ನೀಡಿದ್ದರೆ ಕೊರೊನಾ ವಿರುದ್ಧದ ಹೋರಾಟಕ್ಕೆ ಇನ್ನಷ್ಟು ಬಲ ಬಂದಿರುತ್ತಿತ್ತು ಎಂದರು.

ರಾಜ್ಯಕ್ಕೆ ಲಸಿಕೆ ಬರಲು ಇನ್ನು ಹಲವು ತಿಂಗಳುಗಳಾಗಬಹುದು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹೇಳಿದ್ದಾರೆ. ಕೆಲವೇ ದಿನಗಳಲ್ಲಿ ಕೊರೊನಾ 3ನೇ ಅಲೆ ಬರಲಿದ್ದು, ಅದರ ಬಗೆಗಿನ ತಜ್ಞರ ಅಭಿಪ್ರಾಯವನ್ನು ಗಮನಿಸಿದರೆ, ಮುಂದಿನ ದಿನಗಳ ಬಗ್ಗೆ ಆತಂಕವಾಗುತ್ತದೆ ಎಂದರು.

18 ರಿಂದ 45ರ ವಯೋಮಿತಿಯ ಜನರ ಲಸಿಕೆಗೆ ರಾಜ್ಯ ಸರ್ಕಾರಗಳೇ ಹಣ ಹಾಕಬೇಕು ಎಂದು ಕೇಂದ್ರ ಸರ್ಕಾರ ಹೇಳಿರುವುದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಪ್ರಯತ್ನ. ಕೇಂದ್ರ ಸರ್ಕಾರವೇ ಇಡೀ ದೇಶದ ಜನತೆಗೆ ಉಚಿತವಾಗಿ ಲಸಿಕೆ ನೀಡುವ ಕೆಲಸ ಮಾಡಬೇಕು ಎಂದು ಅವರು ಆಗ್ರಹಿಸಿದರು.

## ಕಾಂಗ್ರೆಸ್ ಪಕ್ಷ ಲಸಿಕೆ ನೀಡಲು ಅನುಮತಿ ಕೊಡಿ

ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ನೀಡಲು ಅನುಮತಿ ನೀಡಿರುವ ರೀತಿಯಲ್ಲೇ, ತನಗೂ ಅನುಮತಿ ನೀಡಬೇಕು ಎಂದು ರಾಜ್ಯ ಕಾಂಗ್ರೆಸ್ ಒತ್ತಾಯಿಸಿದೆ.

ಸರ್ಕಾರವಂತೂ ನಾಡಿನ ಜನತೆಗೆ ಲಸಿಕೆ ನೀಡುವ ಸಾಮರ್ಥ್ಯ ಹೊಂದಿಲ್ಲ. ನಮ್ಮ ಜನತೆಯನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದು ಪಕ್ಷ ಟ್ವೀಟ್ ಮಾಡಿದೆ.

## ಕೊರೊನಾಗೆ ನಾಲ್ವರು ಬಲಿ



ಮಲೇಬೆನ್ನೂರು, ಮೇ 14- ಮಹಾಮಾರಿ ಕೊರೊನಾ ಸೋಂಕಿಗೆ ಶುಕ್ರವಾರ ಮಲೇಬೆನ್ನೂರು ಹೋಬಳಿ ಯಲ್ಲಿ ನಾಲ್ವರು ಬಲಿಯಾಗಿದ್ದಾರೆ.

ಕೊಕ್ಕನೂರು ಗ್ರಾಮದ ಗ್ರಾ.ಪಂ. ಮಾಜಿ ಸದಸ್ಯ ಸಜ್ಜೇರ ಮಾರುತಿ (40) ಅವರು ಹರಿಹರ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಕೊಮಾರನಹಳ್ಳಿ ಗ್ರಾಮದ ಬನ್ನಿಕೋಡು ಹನುಮಂತಪ್ಪ (68) ಎಂಬಾತ ಉಸಿರಾಟದ ತೊಂದರೆಯಿಂದಾಗಿ ಮಲೇಬೆನ್ನೂರಿನಲ್ಲಿ ಸಾವನ್ನಪ್ಪಿದ್ದಾರೆ. ಕೆ.ಎನ್. ಹಳ್ಳಿ ಗ್ರಾಮದ ಪತ್ರಿಕಾ ಪ್ರತಿನಿಧಿ ಕೆ.ಎ. ವಾಗೀಶ್ (28) ಈತನೂ ಉಸಿರಾಟದ ತೊಂದರೆಯಿಂದಾಗಿ ಶುಕ್ರವಾರ ಬೆಳಗೆ ಸಾವನ್ನಪ್ಪಿದ್ದಾನೆ.

ಗೋವಿನಹಾಳ್ ಗ್ರಾಮದಲ್ಲಿ ಬಸವರಾಜ್ (32) ಎಂಬಾತ ಇವತ್ತು ಸಾವನ್ನಪ್ಪಿದ್ದರೆ, ಮಲ್ಲೇಶ್ (35) ಇವರು ಗುರುವಾರ ನಿಧನರಾಗಿದ್ದಾರೆ.

ಇದರ ನಡುವೆ ಶುಕ್ರವಾರ ಬೆಳಿಗ್ಗೆ ವರದಿ ಪ್ರಕಾರ ಹರಿಹರ ತಾಲ್ಲೂಕಿನಲ್ಲಿ 100 ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ.

**ಆಕ್ಸಿಜನ್ ಸೌಲಭ್ಯಕ್ಕೆ ಒತ್ತಾಯ :** ಮಲೇಬೆನ್ನೂರಿನಲ್ಲಿರುವ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕನಿಷ್ಠ 5 ರಿಂದ 10 ಆಕ್ಸಿಜನ್ ಬೆಡ್ ಸೌಲಭ್ಯಗಳಿದ್ದರೆ, ಇವರ್‍ಯಾರು ಉಸಿರಾಟದ ತೊಂದರೆಯಿಂದ ಸಾಯುತ್ತಿರಲಿಲ್ಲ. ಜಿಲ್ಲಾಡಳಿತ ಆರೋಗ್ಯ ಕೇಂದ್ರಗಳಲ್ಲಿ ಆಕ್ಸಿಜನ್ ಬೆಡ್ ಸೌಲಭ್ಯ ಕಲ್ಪಿಸಲು ಗಮನ ಹರಿಸಬೇಕೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಒತ್ತಾಯಿಸಿದ್ದಾರೆ.

## ನ್ಯಾಯಾಂಗ ವ್ಯವಸ್ಥೆ : ಸಚಿವರ ಹೇಳಿಕೆಗೆ ಎನ್.ಟಿ.ಮಂಜುನಾಥ್ ಖಂಡನೆ

ದಾವಣಗೆರೆ, ಮೇ 14- ನ್ಯಾಯಾಂಗ ವ್ಯವಸ್ಥೆ ಕುರಿತಂತೆ ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಮತ್ತು ಮಾಜಿ ಸಚಿವ ಸಿ.ಟಿ.ರವಿ ಅವರುಗಳು ನೀಡಿರುವ ಹೇಳಿಕೆಯನ್ನು ಜಿಲ್ಲಾ ವಕೀಲರ ಸಂಘದ ನಿಕಟ ಪೂರ್ವ ಅಧ್ಯಕ್ಷರೂ ಆದ ಹಿರಿಯ ವಕೀಲ ಎನ್.ಟಿ.ಮಂಜುನಾಥ್ ಖಂಡಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಭಾರತದಲ್ಲಿ ಅದರಲ್ಲೂ ಅತೀ ದೊಡ್ಡ ಜನಸಂಖ್ಯೆಯ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ನ್ಯಾಯಾಂಗ ವ್ಯವಸ್ಥೆಯು ಸ್ವಾತಂತ್ರ್ಯ ಹಾಗೂ ನಿರ್ಮಿತ ವ್ಯವಸ್ಥೆ ಹೊಂದಿದೆ ಎಂದು ಹೇಳಿದ್ದಾರೆ.

'ನ್ಯಾಯಾಧೀಶರು ಸರ್ವಜ್ಞರಲ್ಲ' ಎಂದು ಹೇಳಿರುವ ಸಿ.ಟಿ.ರವಿ ಹಾಗೂ 'ಲಸಿಕೆ ಸಿಗದಿದ್ದರೆ ನೇಣು ಹಾಕಿಕೊಳ್ಳಬೇಕೇ ?' ಎಂದು ಹೇಳಿರುವ ಡಿ.ವಿ.ಸದಾನಂದಗೌಡರು, ನ್ಯಾಯಾಂಗ ವ್ಯವಸ್ಥೆಯನ್ನು ಕುಟುಕಿ ಅವಮಾನ ಮಾಡಿದ್ದಾರೆ ಎಂದು ಮಂಜುನಾಥ್ ಕಿಡಿಕಾರಿದ್ದಾರೆ.

ಇವರಿಬ್ಬರ ಮೇಲೆ ಉಚ್ಛ ಮತ್ತು ಸರ್ವೋಚ್ಛ ನ್ಯಾಯಾಲಯಗಳು ಸ್ವಯಂ ಪ್ರೇರಿತವಾಗಿ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

## ನಗರದ ದೊಡ್ಡಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ಬಸವ ಜಯಂತಿ ಆಚರಣೆ



ದಾವಣಗೆರೆ, ಮೇ 14- ದೊಡ್ಡಪೇಟೆ ಶ್ರೀ ಬಸವೇಶ್ವರ ಸಂಘದ ವತಿಯಿಂದ ಬಸವ ಜಯಂತ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಬಸವೇಶ್ವರ ಸಂಘದ ಅಧ್ಯಕ್ಷ ಅಥಣಿ ವೀರಣ್ಣ, ಬೇತೂರು ರಾಜೇಶ್ ಹಳದಂಡಿಮಠ, ರಾಜಶೇಖರಯ್ಯ, ಬಳ್ಳಾರಿ ಷಣ್ಮುಖಪ್ಪ, ಹೊಳೆಹೊನ್ನೂರು ಈಶ್ವರಪ್ಪ, ಪಲ್ಲಾಗಟ್ಟಿ ಮಂಜುನಾಥ ಮತ್ತಿತರರು ಭಾಗವಹಿಸಿದ್ದರು.

## ತಾಳೇದಹಳ್ಳಿ ಗ್ರಾಮದಲ್ಲಿ ಹೆಚ್ಚಿನ ಕೊರೊನಾ ಪ್ರಕರಣಗಳು ದೃಢ : ಗ್ರಾಮ ಸೀಲ್‌ಡೌನ್ !



ಹರಪನಹಳ್ಳಿ, ಮೇ 14 - ಕೋವಿಡ್-19 ಎರಡನೇ ಅಲೆ ವ್ಯಾಪಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನ ತಾಳೇದಹಳ್ಳಿ ಗ್ರಾಮದಲ್ಲಿ 38 ಕೊರೊನಾ ಪ್ರಕರಣಗಳು ದೃಢಪಟ್ಟಿದ್ದರಿಂದ ಉಪವಿಭಾಗಾಧಿಕಾರಿ ಚಂದ್ರಶೇಖರಯ್ಯ ಹೆಚ್.ಜಿ ಗ್ರಾಮಕ್ಕೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿ, ಇಡೀ ಗ್ರಾಮವನ್ನು ಸೀಲ್‌ಡೌನ್ ಮಾಡಲು ಸ್ಥಳೀಯ ಅಧಿಕಾರಿಗಳಿಗೆ ಸೂಚಿಸಿದರು.

ತಾಳೇದಹಳ್ಳಿ ಗ್ರಾಮದಲ್ಲಿ ಸೋಂಕು ಹೆಚ್ಚಾಗಿರುವ ಸಂಬಂಧ ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್‌ಗೆ ಸ್ಥಳಾಂತರಿಸಲು ಸೋಂಕಿತರೊಂದಿಗೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತ ವ್ಯಕ್ತಿಗಳನ್ನು ಪ್ರತ್ಯೇಕವಾಗಿ ವಾಸವಿರಲು, ಸ್ಥಳೀಯವಾಗಿ ಲಭ್ಯವಿರುವ ಮೊರಾರ್ಜಿ, ಕಿತ್ತೂರು ರಾಣಿ ಚನ್ನಮ್ಮ ವಸತಿಯುತ ಶಾಲೆಗೆ ಸ್ಥಳಾಂತರಿಸಲು ನೀಲಗುಂದ ಗ್ರಾಮ ಪಂಚಾಯತ್ ಕಾರ್ಯದರ್ಶಿಗೆ ಸೂಚನೆ ನೀಡಿದರು.

ತಹಶೀಲ್ದಾರ್ ಎಲ್.ಎಂ. ನಂದೀಶ್ ಮಾತನಾಡಿ ನೆಗಡಿ, ಕೆಮ್ಮು, ಜ್ವರ, ಮೈ-ಕೈ ನೋವು ಇತ್ಯಾದಿ ಕೊರೊನಾ ಸೋಂಕಿನ ಲಕ್ಷಣಗಳು ಕಂಡುಬಂದರೆ ಅಂತಹ ವ್ಯಕ್ತಿಗಳು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ, ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಸಲಹೆ ನೀಡಿದರು.

ಡಿವೈಎಸ್ಪಿ ಹಾಲಮೂರ್ತಿ ರಾವ್ ಮಾತನಾಡಿ, ಅನಾವಶ್ಯಕವಾಗಿ ಯಾರೂ ಮನೆಯಿಂದ ಹೊರಗಡೆ ಬರಬಾರದು, ಗ್ರಾಮದಲ್ಲಿ ಸೋಂಕು ಹೆಚ್ಚು ಹರಡುತ್ತಿರುವುದರಿಂದ ಗ್ರಾಮಸ್ಥರು ಅನವಶ್ಯಕವಾಗಿ ಗುಂಪು ಸೇರಬಾರದು, ಪ್ರತಿಯೊಬ್ಬರೂ ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳಲು, ತಮ್ಮ ತಮ್ಮ ಮನೆಯಲ್ಲಿಯೇ ಆದಷ್ಟು ಪ್ರತ್ಯೇಕವಾಗಿ ಇರಲು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಹನುಮಂತಿ ಬಾಯಿ, ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್ ಪಿ.ಕೆ, ಗುಂಡಗತ್ತಿ ಪಿಹೆಚ್‌ಸಿ ವೈದ್ಯರು, ಹೋಬಳಿ ರಾಜಸ್ವ ನಿರೀಕ್ಷಕರು, ಗ್ರಾಮ ಪಂಚಾಯ್ತಿ ಸದಸ್ಯ ಕೆ.ಹನುಮಂತ್, ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಮಂಜುನಾಥ್, ಗ್ರಾಮ ಲೆಕ್ಕಾಧಿಕಾರಿ ಸಿದ್ದೇಶ್ ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಇದ್ದರು.

## ಮೇ 31ರಂದು ಕೇರಳಕ್ಕೆ ಮುಂಗಾರು

ನವದೆಹಲಿ, ಮೇ 14 – ಈ ಬಾರಿ ಮುಂಗಾರು ಕೇರಳಕ್ಕೆ ಮೇ 31ರಂದು ತಲುಪಲಿದೆ. ಇದು ಸಾಮಾನ್ಯಕ್ಕಿಂತ ಒಂದು ದಿನ ಮುಂಚೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಸಾಮಾನ್ಯವಾಗಿ ಮುಂಗಾರು ಜೂನ್ 1ರಂದು ಕೇರಳಕ್ಕೆ ತಲುಪುತ್ತದೆ. ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳಿಗೆ ಮುಂಗಾರು ಮೇ 21ರಂದು ಬರಲಿದೆ ಎದು ಹವಾಮಾನ ಇಲಾಖೆ ಹೇಳಿದೆ.

## ಕೋಲಾರದಲ್ಲಿ ಲಸಿಕೆ ಉತ್ಪಾದನಾ ಘಟಕ

ಬೆಂಗಳೂರು, ಮೇ 14 - ನೆರೆಯ ಕೋಲಾರ ಜಿಲ್ಲೆಯ ಮಾಲೂರು ಕೈಗಾರಿಕಾ ಪ್ರದೇಶದಲ್ಲಿ ಭಾರತ್ ಬಯೋಟೆಕ್, ಕೋವ್ಯಾಕ್ಸಿನ್ ಲಸಿಕೆ ತಯಾರಿಕಾ ಘಟಕ ಸ್ಥಾಪನೆಯಾಗುತ್ತಿದೆ ಎಂದು ರಾಜ್ಯ ಕೋವಿಡ್ ಕಾರ್ಯಪಡೆ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಮಾಲೂರಿನಲ್ಲಿ ಕೋವ್ಯಾಕ್ಸಿನ್ ಘಟಕ ಬರುತ್ತಿದೆ. ಅಲ್ಲಿಗೆ ರೈಲು ಸೇರಿದಂತೆ ಉತ್ತಮ ಸಂಪರ್ಕ ವ್ಯವಸ್ಥೆ ಇದೆ. ಅಲ್ಲಿಯೂ ಲಸಿಕೆ ತಯಾರಾಗಲಿದೆ ಎಂದಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ಶಾಮನೂರು, ಜೆ.ಹೆಚ್.ಪಟೇಲ್ ನಗರ, ಸಂಭ್ರಮ ಹೋಟೆಲ್ ಸುತ್ತಮುತ್ತ, ಹೊಸ/ಹಳೇ ಕುಂದುವಾಡ, ಕೆ.ಹೆಚ್.ಬಿ. ಕಾಲೋನಿ, ಜರೀಕಟ್ಟೆ, ಮುದಹದಡಿ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯವಾಗಲಿದೆ.

## ಹರಪನಹಳ್ಳಿ ತರಳಬಾಳು ಕಲ್ಯಾಣ ಮಂಟಪ ಕೋವಿಡ್ ಲಸಿಕಾ ಕೇಂದ್ರ

ಹರಪನಹಳ್ಳಿ, ಮೇ 14 - ಸಿರಿಗೆರೆ ತರಳಬಾಳು ಮಠದ ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯರು ತಾಲ್ಲೂಕಿನಲ್ಲಿ ಕೊರೊನಾ ಎರಡನೇ ಅಲೆ ದಿನದಿಂದ ದಿನಕ್ಕೆ ಉಲ್ಬಣವಾಗುತ್ತಿದ್ದುದನ್ನು ಗಮನಿಸಿ, ಸಾರ್ವಜನಿಕ ಆಸ್ಪತ್ರೆಯಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆ ಹಾಗೂ ತಪಾಸಣೆ ಕಾರ್ಯ ನಡೆಯುತ್ತಿರುವುದರಿಂದ ಲಸಿಕೆ ಹಾಕಿಸುವುದು ಸಮಸ್ಯೆಯಾಗಿದ್ದ ಕಾರಣ ಪಟ್ಟಣದ ತರಳಬಾಳು ಕಲ್ಯಾಣ ಮಂಟಪವನ್ನು ಉಚಿತವಾಗಿ ನೀಡಿದ್ದಾರೆ.

ತರಳಬಾಳು ಸಂಸ್ಥೆಯಡಿ ಕಾರ್ಯನಿರ್ವಹಿಸುತ್ತಿರುವ ಕಲ್ಯಾಣ ಮಂಟಪವನ್ನು ಸಾರ್ವಜನಿಕರಿಗೆ ಲಸಿಕಾ ಕೇಂದ್ರ ಮಾಡಿಕೊಳ್ಳಲು ಉಚಿತವಾಗಿ ನೀಡಿದೆ. ಇದರಿಂದ ಆರೋಗ್ಯವಂತರು ಸುರಕ್ಷಿತವಾಗಿ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕ ಆಸ್ಪತ್ರೆಯ ಸಿಬ್ಬಂದಿ ಲಸಿಕಾ ಕೇಂದ್ರವನ್ನು ಮಾಡಿಕೊಂಡಿರುವುದನ್ನು ಸಾರ್ವಜನಿಕರು ಸ್ವಾಗತಿಸಿದ್ದಾರೆ.

## ದೊಡ್ಡಮಾಗಡಿ ನೀರಭತ್ಯಪ್ಪ ನಿಧನ



ದಾವಣಗೆರೆ ಕೊಂಡಜ್ಜಿ ರಸ್ತೆ ಆರ್.ಟಿ.ಒ ಆಫೀಸ್ ಹತ್ತಿರ (ಲತಾ ಬೇಕರಿ)ದ ವಾಸಿ, ಕಾಟನ್ ಮಿಲ್‌ನ ನಿವೃತ್ತ ಕಾರ್ಮಿಕ **ದೊಡ್ಡಮಾಗಡಿ ನೀರಭತ್ಯಪ್ಪ** ಅವರು ದಿನಾಂಕ 14.05.2021ರ ಶುಕ್ರವಾರ ರಾತ್ರಿ 10.30ಕ್ಕೆ ತಮ್ಮ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 85 ವರ್ಷ ವಯಸ್ಸಾಗಿತ್ತು. ನೀರಭತ್ಯಪ್ಪ, ಜೆಡಿಎಸ್ ಮುಖಂಡ ಎಂ.ಎನ್.ನಾಗರಾಜ್ ಅವರೂ ಸೇರಿದಂತೆ ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.05.2021 ಶನಿವಾರ ಬೆಳಿಗ್ಗೆ 11 ಗಂಟೆಗೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

- ದುಃಖತಪ್ತ ಕುಟುಂಬ ವರ್ಗ : 98441-38014

## ಭಾವಪೂರ್ಣ ಶ್ರದ್ಧಾಂಜಲಿ



ಜನನ: 11.12.1943

ನಿಧನ: 13.05.2021

**ದತ್ತಾತ್ರೇಯ ಆರ್. ರೇವಣ್‌ಕರ್**

ಇವರು ದಿನಾಂಕ : 13.05.2021ನೇ ಗುರುವಾರ ರಾತ್ರಿ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿನಾಂಕ 14.05.2021ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ನಗರದ ವೈಕುಂಠ ಧಾಮದಲ್ಲಿ ನೆರವೇರಿಸಲಾಯಿತು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುತ್ತಾರೆ.

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪಾರ್ಥಿಸುತ್ತೇವೆ.

ಇಂತಿ ದುಃಖತಪ್ತರು:

ಸುರೇಂದ್ರ ಡಿ. ರೇವಣಕರ್, ರವೀಂದ್ರ ಡಿ. ರೇವಣಕರ್

ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮತ್ತು ಮೊಮ್ಮಕ್ಕಳು

ನ್ಯೂ ಎಂ.ಜಿ.ಎಸ್. ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ ಮತ್ತು ಸಿಬ್ಬಂದಿ ವರ್ಗ

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಜೆ. ಎಂ. ಗುಂಜಾಳ್**
ಸಹಾಯಕ ಪ್ರಧಾನ ವ್ಯವಸ್ಥಾಪಕರು
ನಿಧನ : 13-05-2021



**ಶ್ರೀ ಹೆಗ್ಗಪ್ಪರ ಶಂಕ್ರಪ್ಪ**
ಸಹಾಯಕ ವ್ಯವಸ್ಥಾಪಕರು
ನಿಧನ : 06-05-2021

ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಿಬ್ಬಂದಿಗಳಾದ **ಶ್ರೀ ಜೆ. ಎಂ. ಗುಂಜಾಳ್** ಹಾಗೂ **ಶ್ರೀ ಹೆಗ್ಗಪ್ಪರ ಶಂಕ್ರಪ್ಪ** ಇವರುಗಳು ಅಕಾಲಿಕ ಮರಣ ಹೊಂದಿದ್ದು, ಇವರುಗಳ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನೌಕರರ ಒಕ್ಕೂಟ (ರಿ.) ದಾವಣಗೆರೆ.**

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರು
**ದಾವಣಗೆರೆ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ವರ್ಗ, ದಾವಣಗೆರೆ.**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte